ಅನುಸೂಚಿತ ಜಾತಿ ಹಾಗೂ ಅನುಸೂಚಿತ ಅದಿಮ ಜಾತಿ ಹಾಗೂ ಹಿಂದುಳಿದ ವರ್ಗದವರಿಗೆ ಲೋಕೋಪಯೋಗಿ ಶಾಖೆಯಲ್ಲಿ ಬಡ್ತಿ ನೀಡುವ ಬಗ್ಗೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸಹಾಯಕ ಅಭಿಯಂತರರನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನಾಗಿ ಹಾಗು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರನ್ನು ಕಾರ್ಯನಿರ್ವಾಹಕ ಅಭಿಯಂತರರನ್ನಾಗಿ ಬಡತಿ ನೀಡುವಲ್ಲಿ ಅನುಸೂಚಿತ ಜಾತಿ ಅನುಸೂಚಿತ ಅದಿಮ ಜಾತಿ ಹಾಗೂ ಹಿಂದುಳಿದ ವರ್ಗದವರಿಗೆ ಆಗಿರುವ ಅನ್ಯಾಯದ ವಿಚಾರವನ್ನು ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ

ಶ್ರೀ ಎಚ್. ಡಿ' ದೇವೇಗೌಡ – (ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಈ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ: —

ಸರ್ಕಾರಿ ಆಜ್ಞೆ ಸಂಖ್ಯೆ ಡಿ. ಪಿ. ಎ. ಆರ್. 29 ಎಸ್. ಬಿ. ಸಿ. 77 ದಿನಾಂಕ 27-4-1978 (ಆನಂತರದ ಸರ್ಕಾರಿ ಆಜ್ಞೆ ಸಂಖ್ಯೆ ಡಿ ಪಿ. ಎ. ಆರ್. 22 ಎಸ್. ಬಿ. ಸಿ. 79 ದಿನಾಂಕ 30-8-1979 ರ ತಿದ್ದುಪಡಿಯ ಮೇರೆಗೆ) ಕನಿಷ್ಟವಿಟ್ಟಿದ ಮೊದಲನೇ ವರ್ಗದವರಿಗೆ ಎಲ್ಲಾ ವರ್ಗದಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ವರ್ಗದವರಿಗೆ ಬಡ್ತಿ ಹುದ್ದೆಗಳಲ್ಲಿ ಮೀಸಲಾಗಿ ಇಡುವ ಸ್ಥಾನಗಳ ಬಗ್ಗೆ ಆಜ್ಞೆಯನ್ನು ಹೊರಡಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನವರಿಗೆ ಮೀಸಲಾತಿಯ ಹುದ್ದೆಗಳನ್ನು ಎಣಿಕೆ ಮಾಡಲು ಪ್ರತಿಯೊಂದು ವರ್ಗದಲ್ಲೂ 33 ಹುದ್ದೆಗಳ ಒಂದು ರೋಸ್ಟರ್ ಅನುಸರಿಸ ಬೇಕಾಗಿದೆ. ಈ ರೋಸ್ಟರ್ 33ನೇ ಹುದ್ದೆಯನ್ನು ತಲುಪುವವರೆಗೆ ಚಾಲ್ತಿಯಲ್ಲಿ ಇರುತ್ತವೆ. ಉದಾಹರಣೆಗೆ ಮೊದಲ ಹಂತದಲ್ಲಿ 25 ಹುದ್ದೆಗಳಿಗೆ ಬಡ್ತಿ ನೀಡಿದರೆ ತದನಂತರದ ಹಂತದಲ್ಲಿ ಮೀಸಲಾತಿಯನ್ನು 26ನೇ ಪಾಯಿಂಟಿನಿಂದ ಪ್ರಾರಂಭವಾಗುತ್ತದೆ. ಮೇಲ್ಕಂಡ ಸರ್ಕಾರಿ ಆಜ್ಞೆಗಳ ಪ್ರಕಾರ ಮೀಸಲಾತಿ ಹುದ್ದೆಗಳಿಗೆ ಬಡ್ತಿ ನೀಡುವಾಗ ಸೇವಾ ಹಿರಿತನ ಮತ್ತು ಅರ್ಹತೆಯನ್ನು ಗಮನಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನವರು ಸೇವಾ ಹಿರಿತನದ ಪಟ್ಟಿಯಲ್ಲಿ ಅವರ ಸ್ಥಾನ ಏನೇ ಇರಲಿ ಅವರಿಗೆ ಬಡ್ತಿ ನೀಡಲಾಗುತ್ತದೆ. ಆದರೆ ಒಂದೇ ಸಲ ಒಂದು ಗುಂಪಿನವರಿಗೆ ಬಡ್ತಿಯನ್ನು ನೀಡಿದಾಗ ಕರ್ನಾಟಕ ಸರ್ಕಾರಿ ನೌಕರರ 1957 ಸೇವಾ ಹಿರಿತನದ ನಿಯಮ 4 ಮತ್ತು ನಿಯಮ 4-ಎ ಗಳ ಪ್ರಕಾರ ಅವರ ಆಂತರಿಕ ಸೇವಾ ಹಿರಿತನವನ್ನು ನಿಗಧಿಪಡಿಸಲಾಗುತ್ತದೆ. 1957 ರ ಸೇವಾ ಹಿರಿತನದ ನಿಯಮ 4 ಈ ಕೆಳಕಂಡತೆ ಇದೆ.

> ನಿಯಮ–4.—ಒಂದು ಹುದ್ದೆ ಅಥವಾ ದರ್ಜೆಗೆ ಸೇವಾ ಹಿರಿತನವನ್ನು ಮತ್ತು ಪ್ರತಿಭೆಯನ್ನು ಅನುಸರಿಸಿ ಏಕ ಕಾಲದಲ್ಲಿ ಬಡ್ತಿ ನೀಡಿದಾಗ ಅವರವರ ಸೇವಾಹಿರಿತನವನ್ನು ಈ ಪ್ರಕಾರ ನಿಗಧಿ ಮಾಡಬೇಕು.
>
> (1) ಒಂದು ಹುದ್ದೆ ಅಥವಾ ದರ್ಜೆಯಿಂದ ಬಡ್ತಿ ನೀಡಿದಾಗ ಕೆಳಗಿನ ದರ್ಜೆ ಅಥವಾ ವರ್ಗದಲ್ಲಿ ಅವರ ಆಂತರಿಕ ಸೇವಾ ಹಿರಿತನವನ್ನು ಗಣನೆಗೆ ತೆಗೆದುಕೊಳ್ಳಬೇಕು.

27-4-1978 ರಲ್ಲಿ ಸರ್ಕಾರವು ಹೊರಡಿಸಿರುವ (30-8-79ರ ತಿದ್ದುಪಡಿಯ ಆಜ್ಞೆಯನ್ನು ಸೇರಿ ಮೀಸಲಾತಿ ಸಂಬಂಧಪಟ್ಟ ಆದೇಶದ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ಬಡ್ತಿಯನ್ನು ಆವುಗಳ ಪ್ರಕಾರವಾಗಿಯೇ ಕೊಡಲಾಗಿದೆ ಮತ್ತು ಪ್ರತಿಯೊಂದು ಬಡ್ತಿ ಆಜ್ಞೆಯಲ್ಲೂ ಬಡ್ತಿ ನೀಡಿದಂತಹವರ ಸೇವಾ ಹಿರಿತನವನ್ನು ಸೇವಾ ಹಿರಿತನದ ನಿಯಮ 4 (1)ರ ಪ್ರಕಾರ ನಿಗದಿ ಪಡಿಸಲಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಅದರ ಪ್ರಕಾರ ಸರ್ಕಾರಿ ಅನುಸೂಚಿತ ಸಂಖ್ಯೆ (1) ಪಿ. ಡಬ್ಲು. ಡಿ. 428 ಎಸ್. ಎ. ಜಿ.82 ದಿನಾಂಕ 19-1-1983 ಮತ್ತು (2) ಪಿ ಡಬ್ಲು. ಡಿ. 218 ಎಸ್. ಪಿ. ಜಿ 82 ದಿನಾಂಕ 19-1-1983ರಲ್ಲಿ ಸಹಾಯಕ ಕಾರ್ಯ ಪಾಲಕ ಅಭಿಯಂತರುಗಳಿಗೆ ಮತ್ತು ಕಾರ್ಯಪಾಲಕ ಅಭಿಯಂತರುಗಳಿಗೆ ಬಡ್ತಿ ನೀಡಿ ಮೇಲ್ಕಂಡ ನಿಯಮಗಳ ಪ್ರಕಾರ ಅವರ ಆಂತರಿಕ ಸೇವಾ ಹಿರಿತನವನ್ನು ಬಡ್ತಿ ಆಜ್ಞೆಯಲ್ಲಿಯೇ ನಿಗಧಿ ಪಡಿಸಲಾಗಿದೆ. ಇದರಿಂದ ಮೀಸಲಾತಿ ಹುದ್ದೆಗಳಿಗೆ ಬಡ್ತಿ ನೀಡಿದಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನ ಅಧಿಕಾರಿಗಳನ್ನು ಇತರೆ ಅಧಿಕಾರಿಗಳ ಕೆಳಗಡೆ ಇಡಲಾಗಿದೆ, ಏಕೆಂದರೆ ಕೆಳದರ್ಜೆಯಲ್ಲಿ ಇತರೆ ಅಧಿಕಾರಿಗಳು ಅವರುಗಳಿಗಿಂತ ಸೇವೆಯಲ್ಲಿ ಹಿರಿಯರು. ದಿನಾಂಕ 19-1-1983ರ ಅಧಿಸೂಚನೆ ಮೊದಲಿಗೆ ನೀಡಿದಂತಹ ಬಡ್ತಿ ಆಜ್ಞೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟಿನವರು ಮತ್ತು ಇತರೆ ಅಧಿಕಾರಿಗಳ ಆಂತರಿಕ ಸೇವಾ ಹಿರಿತನವನ್ನು ನಮೂದಿಸದಿರುವುದು ನಿಜ. ಇದರಿಂದ ಸ್ವಲ್ಪ ಗೊಂದಲಕ್ಕೆ ದಾರಿಯಾಗಿರಬಹುದು. ಆದರೆ ಪ್ರತಿಯೊಂದು ಆಜ್ಞೆಯಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಇತರೆ ವರ್ಗದ ಅಧಿಕಾರಿಗಳ ಆಂತರಿಕ ಸೇವಾ ಹಿರಿತನವನ್ನು 1957 ಸೇವಾ ಹಿರಿತನದ ನಿಯಮ 4 (1)ರ

ಪ್ರಕಾರವೇ ನಿಗಧಿ ಪಡಿಸಲಾಗುತ್ತದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಈ ಅಂಶವನ್ನು ಎಲ್ಲಾ ದರ್ಜೆಯ ಸೇವಾ ಹಿರಿತನದ ಪಟ್ಟಿಯನ್ನು ತಯಾರಿಸುವಾಗ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಈ ಪಟ್ಟಿಗಳೇ ಬಡ್ತಿ ನೀಡಲು ಆಧಾರವಾಗುತ್ತವೆ.

ಮೀಸಲಾತಿ ಹುದ್ದೆಗಳನ್ನು ಕಾದಿರಿಸುವ ನೀಲ್ಕಂಡ 27-4-1978ರ ಸರ್ಕಾರಿ ಆಜ್ಞೆಗಳ ಪ್ರಕಾರ ,,ಕಾದಿರಿಸುವಿಕೆ'' ಹುದ್ದೆಗಳಿಗೆ ಮಾತ್ರ ಸಂಬಂಧಪಟ್ಟಿದ್ದಾಗಿದೆ, ಮತ್ತು ಅವು ಸೇವಾ ಹಿರಿತನವನ್ನು ನಿಗಧಿ ಪಡಿಸಲು ಅಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟ ಪಡಿಸಲಾಗಿದೆ. ಮೀಸಲಾತಿ ಪಾಯಿಂಟಿಗೆ ನೀಡುವ ಬಡ್ತಿಗೂ ಅವರ ಆಂತರಿಕ ಸೇವಾ ಹಿರಿತನಕ್ಕೂ ಸಂಬಂಧವಿಲ್ಲ ಆಂತರಿಕ ಸೇವಾ ಹಿರಿತನವನ್ನು 1957ರ ಸೇವಾ ಹಿರಿತನದ ನಿಯಮುಗಳ ಪ್ರಕಾರವೇ ನೂಡಲಾಗುತ್ತದೆ. ಈ ನಿಯಮಾವಳಿ ಪ್ರಕಾರ ಒಂದೇ ಕಾಲದಲ್ಲಿ ಬಡ್ತಿ ನೂತಲ್ಪಟ್ಟ ಅಭ್ಯರ್ಥಿಗಳ ಹಿರಿತನವು ಕೆಳಗಿನ ಹುದ್ದೆಯಲ್ಲಿ ಇದ್ದ ಅವರ ಹಿರಿತನದ ಅನ್ವಯಾನುಸಾರವಾಗಿ ಇರಬೇಕು ಆದ್ದರಿಂದ ಅತ್ತೀಚಿನ ಬಡ್ತಿ ಆಜ್ಞೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನ ಅಧಿಕಾರಿಗಳನ್ನು ಉದ್ದೇಶ ಪೂರ್ವಕವಾಗಿ ಕೆಳಗಿನ ಸ್ಥಾನಗಳಿಗೆ ತಂದು ಅನ್ಯಾಯ ಮಾಡಲಾಗಿದೆ ಎಂದು ಹೇಳುವುದು ಸರಿಯಲ್ಲ

†ಶ್ರೀ ಎಸ್ ಬಂಗಾರಪ್ಪ — ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈಗ ಓದಿದ ಹೇಳಿಕೆಯನ್ನು ನೋಡಿದ ಮೇಲೆ ಈ ಮೀಸಲಾತಿ ಸ್ಥಾನಗಳಿಗೆ ಸಂಬಂಧ ಪಟ್ಟಂತೆ ಯಾರಿಗೂ ಅನ್ಯಾಯ ಮಾಡುವಂತಹ ಉದ್ದೇಶ ಮಾನ್ಯ ಸಚಿವರಿಗೆ ಇಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ತಾ॥ 19-1-1983 ರಂದು ಈ ವಿಚಾರದಲ್ಲಿ ಹೊರಡಿಸಿರುವಂತಹ ಎರಡು ಆಜ್ಞೆಗಳನ್ನು ನಾನು ನೋಡಿದ್ದೇನೆ ಈ ಎರಡೂ ಆಜ್ಞೆಗಳು ನನ್ನ ಹತ್ತಿರ ಇವೆ ಈ ಆಜ್ಞೆಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ಮೀಸಲಾತಿ ಸ್ಥಾನಗಳಲ್ಲಿ ಬಡ್ತಿ ಕೊಡುವ ವಿಚಾರದಲ್ಲಿ ನಿಮು ಬಂದು ಕೈಮು ಅನುಸರಿಸಿದ್ದಾರೆ ಇದರಿಂದ ಮುಂದೆ ದೊಷ ಗೊಂದಲಕ್ಕೆ ಮತ್ತು ಅನ್ಯಾಯಕ್ಕೆ ಎಡೆಮಾಡಿಕೊಡುತ್ತದೆಂಬುದೇ ನನಗಿರುವ ಶಂಕೆ ಇಲ್ಲಿ ಒಟ್ಟು 44 ಜನರಿಗೆ ಬಡ್ತಿ ಕೊಟ್ಟಿದ್ದಾರೆ. ಈ 44 ಜನರ ಸೆ ಕ 1 ರಿಂದ 37ರವರೆಗೆ ಮೀಸಲಾತಿ ಸ್ಥಾನಗಳಿಗೆ ಸಂಬಂಧಪಟ್ಟವರ ಹೆಸರುಗಳು ಬರುವುದಿಲ್ಲ ಆದರೆ 38 ರಿಂದ 44 ರವರೆಗೆ ಅಂದರೆ ಕೊನೆಯಲ್ಲಿ ತೆಗೆದುಕೊಂಡು ಹೋಗಿ ಹರಿಜನ ಮತ್ತು ಗಿರಿಜನರಿಗೆ ಮೀಸಲಾತಿ ಆಧಾರದ ಮೇಲೆ ಅಂದರೆ ರೋಸ್ಟರ್ ಸಿಸ್ಟಂ ಆಧಾರದ ಮೇಲೆ ಬಡ್ತಿ ಕೊಟ್ಟಿದ್ದಾರೆ. ಶ್ರೀ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಮತ್ತು ನಾನು ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿದ್ದಾಗ ಅಂದರೆ 1978ನೇ ಇಸವಿಯಲ್ಲಿ ಈ ವರ್ಗಗಳ ಜನರಿಗೆ ಎಲ್ಲೆಲ್ಲಿ ಅನ್ಯಾಯವಾಗಿದೆಯೋ ಅಲ್ಲೆಲ್ಲಾ ಸರಿಪಡಿಸಬೇಕು ಮತ್ತು ಇರುವಂತಹ ಬ್ಯಾಕ್-ಲಾಗನ್ನು ತುಂಬಬೇಕು ಎಂದುಕೊಂಡು ಬಡ್ತಿ ಕೊಡುವ ವಿಚಾರದಲ್ಲಿ ಈ ರೋಸ್ಟರ್ ಸಿಸ್ಟಮುನ್ನು ಜಾರಿಗೆ ತರಲಾಯಿತು ಈ ರೋಸ್ಟರ್ ಸಿಸ್ಟಮ್‌ಗೆ ಸಂಬಂಧಪಟ್ಟಂತೆ ಇರುವ ಆಜ್ಞೆಯನ್ನು ಯಾವ ರೀತಿ ಜಾರಿಗೆ ಕೊಡಬೇಕು ಮತ್ತು ಹರಿಜನ ಮತ್ತು ಗಿರಿಜನರನ್ನು ರೋಸ್ಟರ್‌ನ ಮುಖೈ ಮುಖೈ ಯಾವ ರೀತಿ ಸೇರಿಸಬೇಕೆಂಬುದನ್ನು 1982 ರಲ್ಲಿ ಹೊರಡಿಸಿರುವಂತಹ ಒಂದು ಆಜ್ಞೆಯಲ್ಲಿ ಸ್ಪಷ್ಟಪಡಿಸಲಾಗಿದೆ ಈ ಒಂದು ಆಜ್ಞೆಯ ಪ್ರಕಾರ ಇಲ್ಲಿ ಬಡ್ತಿ ಕೊಡುವ ಕೊನೆಯ ಹಂತದಲ್ಲಿ ಕೊಟ್ಟಿರುವುದರಿಂದ ಇವರುಗಳಿಗೆ ಯಾವ ರೀತಿ ಅನ್ಯಾಯವಾಗುತ್ತದೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ 38 ರಿಂದ 44 ನೇ ಸ್ಥಾನದವರೆಗೆ ರೋಸ್ಟರ್ ಸಿಸ್ಟಂ ಪ್ರಕಾರ ಹರಿಜನ ಮತ್ತು ಗಿರಿಜನರಿಗೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಗ್ರೇಡ್‌ನಿಂದ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಿ ಬಡ್ತಿ ಕೊಟ್ಟಿದ್ದೀರಿ. ಈ ರೋಸ್ಟರ್ ಸಿಸ್ಟಂ ಎಕ್ಸಿಕ್ಯುಟಿವ್ ಇಂಜಿನಿಯರ್ ಹುದ್ದೆಯನ್ನರೆಗೆ ಮಾತ್ರ ಅನ್ವಯವಾಗುತ್ತದೆ. ಮುಂದೆ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳ ಹುದ್ದೆಗೆ ಬಡ್ತಿ ಕೊಡುವಾಗ ಒಂದರಿಂದ 37ರ ವರೆಗೆ ಇರುವಂತಹವರ ಸೇವಾ ಹಿರಿತನವನ್ನು ನೋಡಿಕೊಂಡು ಬಡ್ತಿ ಕೊಡಲಾಗುತ್ತದೆ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳ ಮತ್ತು ಹುದ್ದೆಗಳು ಇಲ್ಲಿಯೇ ಇಪ್ಪತ್ತು ಹುದ್ದೆಗಳು ಮುಂದೆ ಖಾಲಿಯಾದಾಗ ಅರ್ಹತೆ ಆಧಾರದ ಮೇಲೆ ಬಡ್ತಿ ಕೊಡಬೇಕಾಗುತ್ತದೆ. ಇಂತಹ ಸಂದರ್ಭ ಬಂದಾಗ ಇಲ್ಲಿ 38 ರಿಂದ 44 ರವರೆಗೆ ಇರತಕ್ಕಂಥ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಗೆ ಪ್ರಮೋಷನ್ ಸಿಗುವುದಿಲ್ಲ ಇದೇ ಉದ್ದೇಶದಿಂದ ಇದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿರುವುದು. ಈ 1983ನೇ ಬಡ್ತಿ ಆಜ್ಞೆ ಪ್ರಕಾರ ಈ ರೀತಿ ಕೊನೆಯಲ್ಲಿರುವವರು ತಮ್ಮ ಸೇವಾ ಹಿರಿತನಕ್ಕೆ ಬರಲು ಬಹಳ ಕಾಲ ಕಾಯಬೇಕಾಗುತ್ತದೆ. ಮುಂದೆ ಇವರಲ್ಲಿ ಕೆಲವರಿಗೆ ಸಾಕಷ್ಟು ಸರ್ವಿಸ್ ಇದ್ದರೆ ಈ ಮುಂದಿನ ಬಡ್ತಿ ಸಿಗಬಹುದು, ಸರ್ವಿಸ್ ಇಲ್ಲದಿದ್ದರೆ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಾಗಿಯೇ ನಿವೃತ್ತರಾಗಬೇಕಾಗುತ್ತದೆ

1. p. m.

ಇದನ್ನು ಸರಿಪಡಿಸಬೇಕು ಎನ್ನುವ ಉದ್ದೇಶದಿಂದ ಈ ವಿಷಯವನ್ನು ಪ್ರಸ್ತಾಪಮಾಡುತ್ತಿದ್ದೇನೆ. ಅದೇ ರೀತಿ ಮತ್ತೊಂದು ಸಾರಿ ಪ್ರಮೋಷನ್ ಕೊಡುವಾಗ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಗ್ರೇಡ್

ನಿಂದ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಪ್ರಮೋಷನ್‌ನನ್ನು ಅದೇ ತಾರೀಖಿನಲ್ಲಿ ಕೊಟ್ಟಿದ್ದಾರೆ. ಆದರಲ್ಲೂ ಕೂಡ 107ರಿಂದ 120ರನರೆಗೆ ಯಾವುದೇ ರಿಸರ್ವ್ ಕ್ಲಾಸ್ ಬರುವುದಿಲ್ಲ. 107ರನರೆಗೂ ಕೂಡ ಯಾವುದೇ ರಿಸರ್ವ್ ಕ್ಲಾಸ್ ಬರುವುದಿಲ್ಲ. ಹರಿಜನ-ಗಿರಿಜನರಿಗೆ ಯಾವ ಪ್ರಕಾರ ಪ್ರಮೋಷನ್ ಕೊಡಬೇಕೆಂದು ಸರ್ಕಾರಿ ಆರ್ಡರ್ ಮಾಡಿ ಇಟ್ಟಿದ್ದಾರೆ. ತನ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಉತ್ಕಟ ಇಚ್ಛೆ ಹಿಂದಿನ ಸರ್ಕಾರಕ್ಕೆ ಇತ್ತು. ಆದರ ಬಗ್ಗೆ ರೋಸ್ಟರ್ ಸಿಸ್ಟವ್ ಫಾಲೋ ಮಾಡಬೇಕೆನ್ನುವ ಗೌರ್ನಮೆಂಟ್ ಆರ್ಡರ್ ಇದೆ. ಸರ್ಕಾರಿ ಆಜ್ಞೆಯ ದಿನಾಂಕ 27-4-1978 ರ ರೋಸ್ಟರ್ ಅನೆಕ್ಸರ್ (2) ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಕೋಟ್ ಮಾಡಿದ್ದಾರೆ. I have got all those original copies here. ಈ ಜನರಿಗೆ ದೊಡ್ಡ ಅನ್ಯಾಯವಾಗಿದೆ. ಇದು ಮಾನ್ಯ ಸಚಿವರಾದ ದೇವೇಗೌಡರ ಗಮನಕ್ಕೆ ಬಂದಿದೆಯೋ ಎನ್ನುವುದು ಗೊತ್ತಿಲ್ಲ. ಯಾರೂ ಕೂಡ ಸೂಪರಿಂಟಿಂಡಿಂಗ್ ಇಂಜಿನಿಯರ್‌ಗಳು ಆಗುತ್ತಿಲ್ಲ. ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ನಿಂದ ಎಕ್ಸಿಕ್ಯೂಟೀವ್ ಆಗುವುದಕ್ಕೆ ಆಗುತ್ತಿಲ್ಲ. ಎಷ್ಟೋ ಜನ ಪ್ರಮೋಷನ್ ಬರುವುದರೊಳಗೆ ರಿಟೈರ್ ಆಗುತ್ತಾರೆ ಬಹಳ ಅನ್ಯಾಯವಾಗಿದೆ, ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕು 1978ರ ಸರ್ಕಾರಿ ಆಜ್ಞೆಯ ಪ್ರಕಾರ ಅವರಿಗೆಆಗಿರತಕ್ಕ ಅನ್ಯಾಯವನ್ನು ಸರಿಪಡಿಸಲೇಬೇಕು. ಅಧಿಕಾರಿಗಳು ಏನೇ ಕಾರಣ ಕೊಡಲಿ, ಮೊದಲು ಅವರಿಗೆ ನ್ಯಾಯ ದೊರಕಿಸಿ ಕೊಡಿ.

(ಅಧ್ಯಕ್ಷ ಪೀಠಕ್ಕೆ ಶ್ರೀ ಪಿ. ರಾಂದೇವ್‌ರವರು ಬಂದರು)

ತಾ|| 27-4-78 ರ ಜಿ. ಓ. ಪ್ರಕಾರ ಮಾರ್ಪಾಟು ಮಾಡಬೇಕೆಂದು ನನ್ನ ಅಭಿಪ್ರಾಯ ಅದರ ಬಗ್ಗೆ ತಾವು ಏನು ಹೇಳುತ್ತೀರಿ ಎಂಬುದನ್ನು ತಿಳಿಸಬೇಕು

ಶ್ರೀ ಎಚ್. ಡಿ. ದೇವೇಗೌಡ.–1978 ರಲ್ಲಿ ಏನು ರೋಸ್ಟರ್ ಸಿಸ್ಟಮ್ ಜಾರಿಗೆ ತರಬೇಕೆಂದು ನಿರ್ಣಯ ಮಾಡಿದ್ದಾರೆ, ಅದರಲ್ಲಿರತಕ್ಕ ಆಜ್ಞೆಯ ಒಂದು ಭಾಗವನ್ನು ತನ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ರೋಸ್ಟರ್ ಸಿಸ್ಟಮನ್ನು ಜಾರಿಗೆ ಕೊಡಬೇಕೆಂದು ಹೇಳಿದನೇಲೆ

"reservations for persons belonging to Scheduled Castes and Scheduled Tribes under article 16(1)of the Constitutionn ie specified categories of promotional vacancies. The inter-seniority amongst persons promoted on any occasion shall be determined in accordance with the Rule or 4 (A) as the case may be of the Karnataka Government Servant 'Seniority Rules 1957".

ಇದು ತಮ್ಮ ಕಾಲದಲ್ಲಿ ಮಾಡಿರತಕ್ಕದ್ದು, ನಾವೇನೂ ಹೊಸದಾಗಿ ಆರ್ಡರ್ ಮಾಡಿಲ್ಲ. ಅದನ್ನು ಬಿಟ್ಟು ನಾನು ಮುಂದೆ ಹೋಗುವುದಕ್ಕೆ ಸಾಧ್ಯವಿಲ್ಲ ಅದನ್ನು ಬಿಟ್ಟು ಮಾಡಿದರೆ ಬೇರೆ ವಿಷಯ. ಇದುವರೆಗೂ ಆ ಒಂದು ದಿಕ್ಕೂಚಿ ಅಂದರೆ ಅಳತೆಗೋಲು ಪ್ರಕಾರ ಹಾಗೂ 1978ರ ರೋಸ್ಟರ್ ಸಿಸ್ಟಮ್‌ನಲ್ಲಿ ಅಳವಡಿಸಿರತಕ್ಕ ನಿಬಂಧನೆಯ ಪ್ರಕಾರ ಮಾಡಲಾಗಿದೆ. ಆದರಲ್ಲಿ ಏನಾದರು ತಪ್ಪಾಗಿದರೆ ಸರಿಮಾಡೋಣ. ಎಲ್ಲಾ ಅಧಿಕಾರಿಗಳನ್ನು ಕರೆಸೋಣ, ಚರ್ಚೆ ಮಾಡೋಣ ಆದರಲ್ಲಿ ಯಾವ ತರಹ ರಿಸರ್ವೇಷನ್ ಇಲ್ಲಾ. ನಾನು ಪ್ರಮೋಷನ್ ಕೊಡತಕ್ಕ ಕಾಲದಲ್ಲಿ ಕೆಲವರನ್ನು ಕೆಳಗಡೆ ಇಟ್ಟಿದಾರೆಂದು ಹೇಳಿದಾರೆ, ಪ್ರಶ್ನೆ ಅದಲ್ಲ. ಹಿಂದೆ ಮಾಡಿರತಕ್ಕ ಆರ್ಡರನ್ನು ಕೋಟ್ ಮಾಡುವುದಕ್ಕೆ ಹೋಗುವುದಿಲ್ಲ. 1979 ರಲ್ಲಿ ಪ್ರಮೋಷನ್ ಕೊಟ್ಟಿದ್ದಾರೆ. ಆಗ ಏನು ಮಾಡಿದಿರಿ ? ಗೌರ್ನಮೆಂಟ್ ಆರ್ಡರ್‌ನಲ್ಲಿ ಸ್ಪೆಸಿಫೈ ಮಾಡಿದ್ದಾರೆ ಆ ಆರ್ಡರ್‌ನ ಒಂದು ಭಾಗನನ್ನು ಓದುತ್ತೇನೆ. "The relative seniority of Scheduled Castes and Scheduled Tribes Assistant Executive Engineer promotees with those of the Assistant Executive Engineers belonging to the other categories shall be as per Rule 4 (1) of the Karnataka Government Servants" Seniority Rules, 1957."

ಇವತ್ತು ನಾವು ಅದರ ಆಧಾರದ ಮೇಲೆ ಮಾಡಿರತಕ್ಕದ್ದು, ಆ ಒಂದು ನಿಬಂಧನೆಯನ್ನು ಕೋರ್ಟ್ ಮಾಡಿದ್ದೇನೆ ಅದರ ಪ್ರಕಾರ ರೋಸ್ಟರ್ ಸಿಸ್ಟಮ್ ಪ್ರಕಾರ ಪ್ರಮೋಷನ್ ಇರತಕ್ಕದ್ದು. ಸೀನಿಯಾರಿಟಿಯನ್ನು ನೆಗ್ಲೇಕ್ಟ್ ಮಾಡುವುದಕ್ಕಲ್ಲ. 15+3 ಒಟ್ಟು 18 ಪರ್ಸೆಂಟನ್ನು ಕೊರತೆ ಇರುವ ಕಡೆ ಭರ್ತಿ ಮಾಡಲಿಕ್ಕೆ ರೋಸ್ಟರ್ ಸಿಸ್ಟಮ್ ಇರುವುದು. 18 ಪರ್ಸೆಂಟ್ ಭರ್ತಿ ಮಾಡಲಿಕ್ಕೆ ರೋಸ್ಟರ್ ಸಿಸ್ಟಮ್ ಇದೆಯೇ ಪರಂತು ಬೇರೆಯದಕ್ಕೆ ಅಲ್ಲ. ಸೀನಿಯಾರಿಟಿಯನ್ನು ತಾ 4-1-77ರ ರೂಲ್ ಪ್ರಕಾರ ಮಾಡಿದಾರೆ. ಅದರ ಪ್ರಕಾರ ಪ್ರಮೋಷನ್ ಕೊಡಲಾಗುತ್ತಿದೆ. ಇದರಲ್ಲಿ ದಿಕ್ಕು ತಪ್ಪಿ ಹೋಗಲಾಗಿದೆಯೇ

ಎಂಬುದಕ್ಕೆ ಸ್ಪಷ್ಟೀಕರಣ ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. 44 ಜನಗಳಿಗೆ ಪ್ರಮೋಷನ್ ಕೊಡತಕ್ಕ ಕಾಲದಲ್ಲಿ 5ಜನಗಳನ್ನು ಕೆಳಗಡೆಯವರನ್ನು ತೆಗೆದುಕೊಳ್ಳಲಾಗಿದೆ. ಆ ಪಟ್ಟಿಯಲ್ಲಿ 100 ಜನ ಏನು ಅಸಿಸ್ಟಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್‌ಗಳು ಇದ್ದರೂ ಅವರಲ್ಲಿ ರೋಸ್ಟರ್ ಸಿಸ್ಟಮ್ ಪ್ರಕಾರ ಬರತಕ್ಕವರು ಒಬ್ಬರೂ ಇಲ್ಲ. ನಿಯಮಗಳ ಪ್ರಕಾರ ಅವರನ್ನು ಕೊನೆಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಯಾವುದೇ ರೀತಿಯ ದುರುದ್ದೇಶದಿಂದವಾಡಿಲ್ಲ. ಇರತಕ್ಕ ನಿಯಮಾವಳಿ ಪ್ರಕಾರ ಅಯಾಯ ಪ್ಲೇಸ್‌ಗೆ ಬರುತ್ತಿದ್ದಾರೆ. ನಾನು ತಪ್ಪಿ ಮಾಡಿದ್ದರೆ ಸಕ್ರೇಟರಿಯೇಟ್‌ನವರು ಇದ್ದಾರೆ ಅವರು ನಮಗೆ ಮಾರ್ಗದರ್ಶನ ಕೊಡುತ್ತಾರೆ ; ಜೊತೆಗೆ ಇಬ್ಬರೂ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ ಆಫೀಸರ್‌ಗಳನ್ನು ಕರೆಸಿದ್ದೆನೆ. ಶಿವಲಿಂಗಯ್ಯ ಮತ್ತು ರಾಮಯ್ಯ ಎಂಬುವರು ಬಂದಿದ್ದರು. ಅವರಿಗೆ ನಾವು ಮಾಡಿರತಕ್ಕ ಲಿಸ್ಟನ್ನು ತೋರಿಸಿದಾಗ ಅವರು ಇದರಲ್ಲಿ ಯಾವುದೇ ರೀತಿಯ ಅನ್ಯಾಯವಾಗಿಲ್ಲವೆಂದು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ. ಎಲಾ ಅಧಿಕಾರಿಗಳನ್ನು ಕರೆಸಿ ನಾವು ಮಾಡಿರತಕ್ಕ ಪಟ್ಟಿಯನ್ನು ನಿಯಮಾವಳಿಯ ಪ್ರಕಾರ ಮಾಡಲಾಗಿದೆಯೆ? ನಿಯಮವನ್ನು ಬಿಟ್ಟು ಹೊರಗೆ ಹೋಗಿದ್ದರೆ ಅದನ್ನು ಸರಿಮಾಡಲಿಕ್ಕೆ ಸಿದ್ಧವಾಗಿದ್ದೇವೆಂದು ನಾನು ಸ್ಪಷ್ಟೀಕರಣ ಮಾಡುತ್ತೇನೆ. ಇದರಲ್ಲಿ ಯಾವುದೇ ರೀತಿಯ ಅನ್ಯಾಯವಾಗಿಲ್ಲ. ರೋಸ್ಟರ್ ಸಿಸ್ಟಮ್ ಪ್ರಕಾರ ಸೀನಿಯಾರಿಟಿ ಲಿಸ್ಟನ ಆಧಾರದ ಮೇಲೆ 57 ಜನರಿಗೆ ಪ್ರಮೋಷನ್ ಕೊಟ್ಟಿದೆವೆ ಇರತಕ್ಕ ಷರತ್ತುಗಳ ಪ್ರಕಾರ ಪ್ರಮೋಷನ್ ಕೊಟ್ಟಿದ್ದೇವೆ. ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ಪ್ರಮೋಷನ್ ಕೊಡಬೇಕಾಗುತ್ತು. ಜೂನಿಯರ್ ಸ್ಕೇಲ್ ಸೀನಿಯರ್ ಸ್ಕೇಲ್ ಮತ್ತು ಸೀನಿಯಾರಿಟಿ ವ್ಯವಸ್ಥೆ ಇರುವುದರಿಂದ ಕೊಡುವುದಕ್ಕೆ ಆಗಿಲ್ಲ. ಅಲ್ಲಿ ರಿಲೇಟಿವ್ ಎಂಬ ಯಾರಿಗೂ ಪ್ರಮೋಷನ್ ಕೊಡುವುದಕ್ಕಾಗುವುದಿಲ್ಲ ಸೀನಿಯಾರಿಟಿ ಮತ್ತು ಗ್ರೇಡೇಷನ್ ಲಿಸ್ಟ್ ಮಾಡುತ್ತಾರೆ ಸರ್ಕಿಂಗ್ ಲಿಸ್ಟ್ ರೋಸ್ಟರ್ ಸಿಸ್ಟಮ್‌ಅ ಒಂದು ಆಧಾರದ ಮೇಲೆ ಪ್ರಮೋಷನ್ ಕೊಡುತ್ತಾ ಹೋಗುತ್ತೇವೆ. ಈ ಸಂದರ್ಭದಲ್ಲಿ ಕೆಳಗಡೆ ಇರತಕ್ಕವರು ಈ ಷರತ್ತುಗಳಿಗೆ ಬರುತ್ತಾರೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳಿಗೆ ಚೀಫ್ ಇಂಜಿನಿಯರ್‌ಗಳಾಗಿ ಪ್ರಮೋಷನ್ ಕೊಡುವಾಗ ರೋಸ್ಟರ್ ಸಿಸ್ಟಮ್ ಫಾಲೋ ಮಾಡಿಕೊಂಡು ಇರತಕ್ಕ ಗ್ಯಾಪನ್ನು ಫಿಲಪ್ ಮಾಡಿಕೊಂಡು ಬಂದಿದ್ದಾರೆ. ರೋಸ್ಟರ್ ಸಿಸ್ಟಮ್ ಬಂದಾಗ ಸೀನಿಯಾರಿಟಿ ಆಧಾರದ ಮೇಲೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ ಈಗಿರತಕ್ಕ ನಿಯಮಾವಳಿಗಳ ಪ್ರಕಾರ ಬಡ್ತಿ ಕೊಡುವ ವಿಚಾರದಲ್ಲಿ ಮಾನ್ಯ ಸಚಿವರು ಹೇಳಿರುವುದನ್ನು ನಾನು ಕೇಳಿದೆನೆ. ತಾ : 27-4-78ರ ನಿಯಮಾವಳಿಗಳು ಆದಮೇಲೆ ಹಿಂದಿನ ಸರ್ಕಾರದವರು 27-8-82 ರಲ್ಲಿ ಒಂದು ನೋಟಿಫಿಕೇಷನ್ ಹೊರಡಿಸಿದಾರೆ. ಅದರ ಪ್ರಕಾರ ಏನು ಮಾಡಿದಾರೆಂಬುದು ತಮಗೆ ಗೊತ್ತಿದೆ. 27-4-78ರ ರೋಸ್ಟರ್ ಸಿಸ್ಟಮ್ ಪ್ರಕಾರ ಅವರು ಮಾಡಿದ್ದಾರೆ. ನಾನು ಒಂದು ಉದಾಹರಣೆ ಕೊಡುತ್ತೇನೆ this pertains to Assistant Engineers to Assistant Executive Engineers ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್‌ಗಳಿಗೆ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳಾಗಿ ಪ್ರಮೋಷನ್ ಕೊಡುವ ವಿಚಾರದಲ್ಲಿ, ಅದರಲ್ಲಿ ಜೆನ್ನಾಗಿ ಹೇಳಿದಾರೆ. 1ರಿಂದ 94ರ ವರೆಗೂ ಪ್ರಮೋಷನ್ ಕೊಟ್ಟಿದ್ದಾರೆ. 1, 2, 3. ರಿಸರ್ವೇಷನ್ ಕ್ಲಾಸ್ 27-4-78ರ ಆರ್ಡರ್ ಅಪ್ಲೈ ಮಾಡಿದರು. ನಾಲ್ಕನೇಯವನು ರಿಸರ್ವೇಷನ್ ಕ್ಲಾಸ್, ಅಲ್ಲಿಂದ 11ಕ್ಕೆ ಬಂದಿದ್ದಾರೆ. ಹಾಗೆಯೇ 19, 24, 31, 32, 37, 44, 51, 58, 64, 70, 77, 84, ಮತ್ತು 90, This is the correct way of applying this order of 27.4.78, according to me. ನಿಮ್ಮಲ್ಲಿರತಕ್ಕ ಗೌರ್ನಮೆಂಟ್ ಆರ್ಡರ್ ಬೇರೆ ಅರ್ಥ ಬರುವ ಹಾಗೆ ನಾನು ಲೋಕೋಪಯೋಗಿ ಮಂತ್ರಿಯಾಗಿದ್ದಾಗ 27-4-78 ರ ಗೌರ್ನಮೆಂಟ್ ಆರ್ಡರ್ ಪ್ರಕಾರ ಮಾಡಿದ್ದೇನೆ 27-8-82 ರಲ್ಲಿ ಹಿಂದಿನ ಸರ್ಕಾರ ಏನು ಗೌರ್ನಮೆಂಟ್ ಆರ್ಡರ್ ಮಾಡಿದಾರೆ ಆ ಒಂದು ಆರ್ಡರ್‌ದಲ್ಲಿ ವಿಚಾರ ಮಾಡುತ್ತಿದ್ದೀರಿ. ಅದರಲ್ಲಿ ತೊಡಕಿದೆ ತೊಡಕಿರುವುದನ್ನು ತತ್‌ಕ್ಷಣ ಸರಿಪಡಿಸಿ ರೋಸ್ಟರ್ ಸಿಸ್ಟಮ್ ಪ್ರಕಾರ ಮುಂದೆ ರಿಸರ್ವ್‌ಕ್ಲಾಸ್‌ನವರಿಗೆ ಪ್ರಮೋಷನ್ ಕೊಟ್ಟಿರೆ ನ್ಯಾಯವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ನಾನು ಇದ್ದಾಗ ಮಾಡಬೇಕಾಗಿತ್ತು ಎಂದು ನೀವು ಸಚಿವರು ಆಗಿಲ್ಲದೇ ಇರುವಾಗ ಯೋಚನೆ ಮಾಡಿದರೆ ಏನು ಉಪಯೋಗ ?

ಮಾನ್ಯ ಮಂತ್ರಿಗಳು ಮಾಡಿರುವಂಥದು ಬಹಳ ಒಳ್ಳೆಯದು. ಆದರೂ ಕೂಡ ನಾನು ಮಾನ್ಯ ಮಂತ್ರಿಗಳನ್ನು ಒಂದು ಮಾತನ್ನು ಮುಖ್ಯವಾಗಿ ಕೇಳಬೇಕಾಗಿದೆ. ಆದು ಏನೆಂದರೆ ತಾವು ಏನೋ ಅಸಿಸ್ಟೆಂಟ್ ಇಂಜಿನಿಯರ್ಸ್ ಫೇ ಸ್ಕೇಲ್ ಜಾಸ್ತಿ ಮಾಡುವುದಕ್ಕೆ ಏನೋ ನೂಪ್ ಮಾಡುತ್ತಿದ್ದೀರಿ ಎಂದು ಗೊತ್ತಾಗಿದೆ. ಆದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ತಾವು ಏನಾದರು ಬಂದುಬೇಕೆ ಈ ಅಸಿಸ್ಟೆಂಟ್ ಇಂಜಿನಿಯರ್ಸ್ ಫೇ ಸ್ಕೇಲ್ ಜಾಸ್ತಿ ಮಾಡಿದರೆ ಆ ಫೇನೆ ಅವರು ರೀಚ್ ಆಗಿದ್ದರೆ ಆಗ ಅವರಿಗೆ ಈ

ರೋಸ್ಟರ್ ಸಿಸ್ಟೆಂ ಆಸ್ಲೆ ಆಗುವುದಿಲ್ಲ. ಆದ್ದರಿಂದ ಇದರ ಒಂದು ಅರ್ಥ ಏನು ಎಂಬುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಿದರೆ ನನಗೆ ಇರತಕ್ಕಂಥ ಅನುಮಾನ ಪರಿಹಾರವಾಗುತ್ತದೆ. ಎರಡನೆಯದಾಗಿ 1872ನೇ ಇಸವಿಯಲ್ಲಿ ಸರ್ಕಾರದವರು ಹೊರಡಿಸಿರುವಂಥಹ ಒಂದು ಫಾಲಿಸಿಯನ್ನೇ ತಾವು ಅನುಸರಿಸಿಕೊಂಡು ಬಂದಿರುವುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ನಮ್ಮ ಮಾನ್ಯ ಸಚಿವರು ಒಳ್ಳೆಯ ಮಾತನ್ನು ಆಡಿದಾರೆ. ಆದರೂ ಕೂಡ ನಾನು ಟೀಕೆ ಮಾಡಿದ್ದು ಕಾರಣವೇನೆಂದರೆ ಈ ಇಲಾಖೆಯಲ್ಲಿ ಯಾರು ಎಸ್. ಸಿ. ಮತ್ತು ಎಸ್. ಟಿ. ಇರುತ್ತಾರೋ ಅಥವಾ ಬಿ. ಸಿ. ಎಮ್. ವರ್ಗಕ್ಕೆ ಯಾರ್ಯಾರು ಬರುತ್ತಾರೋ ಅವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದೇ ನಮ್ಮೆಲ್ಲರ ಆಸೆ. ಅದೇ ರೀತಿಯಲ್ಲಿ ತಾವು ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನೀಯರ್‌ರವರನ್ನು ಕರೆಸಿ ಮಾತಾನಾಡಿದ್ದು ಒಳ್ಳೆಯದು. ಅವರ ಒಂದು ಅಭಿಪ್ರಾಯವನ್ನು ಕೂಡ ತಾವು ತೆಗೆದುಕೊಂಡಿದ್ದೀರಿ. ಅದೇ ರೀತಿಯಲ್ಲಿ ತಾವು ಹೇಳಿದ ಹಾಗೆ ನುತ್ತೋನ್ನೆಮ್ ಮೀಟಿಂಗ್ ಕರೆದಾಗ ನಮ್ಮನ್ನು ಕರೆಸಿದರೆ ಆಗ ನಾವು ಕೂಡ ಸೂಕ್ತ ಸಲಹೆಯನ್ನು ಕೊಡಬಹುದು. ಆಗ ಯಾರಿಗೆ ಅನ್ಯಾಯ ವಾಗಿದೆಯೋ ಅವರಿಗೆ ನ್ಯಾಯವನ್ನು ಒದಗಿಸಿಕೊಟ್ಟಂತೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಪ್ಪಾರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀನಾನ್ ಬಂಗಾರಪ್ಪನವರು ಹೇಳಿದ್ದನ್ನು ನಾನೂ ಕೂಡ ಒಪ್ಪಿಕೊಂಡಿದ್ದೇನೆ. ಆದರೆ ನುಖ್ಯವಾಗಿ ಎಲ್ಲರಿಗೂ ಗೊತ್ತಿದ್ದ ಹಾಗೆ ಈ ರೋಸ್ಟರ್ ಸಿಸ್ಟಂನ್ನು ಜಾರಿಗೆ ತಂದ ಉದ್ದೇಶವೇನೆಂದರೆ, ಯಾರೂ ಹೈಯರ್ ಜನಾಂಗದವರು ಇರುತ್ತಾರೋ ಅವರಿಗೆ ಇಲ್ಲಿಯವರೆಗೆ ಚೀಫ್ ಇಂಜಿನೀಯರ್ ಪೋಸ್ಟ್ ನುತ್ತು ಸೂಪರಿಂಟಿಂಡಿಂಗ್ ಇಂಜನೀಯರ್ ಪೋಸ್ಟ ಸಿಗುತ್ತಿತ್ತು ಆಗ ಇದರಲ್ಲಿ ಯಾರೂ ಎಸ್. ಸಿ. ಮತ್ತು ಎಸ್. ಟಿ. ಜನಾಂಗದವರು ಬರುತ್ತಾ ಇರಲಿಲ್ಲ ಆಗ ನಾವು ಈ ರೋಸ್ಟರ್ ಸಿಸ್ಟಂನ್ನು ಜಾರಿ ಮಾಡಿದ್ದು. ಈ ರೋಸ್ಟರ್ ಸಿಸ್ಟಂನ್ನು ಬೇರೆ ಇಲಾಖೆಯಲ್ಲಿ ಫಾಲಿಸಿಕೊಂಡು ಬಂದಿದ್ದಾರೆ. ಈ ಹೈಯರ್ ಕ್ಯಾಟಗರಿಸ್ ಗೆ ಬೇರೆ ರೋಸ್ಟರ್ ಸಿಸ್ಟಂನ್ನು ಫಾಲಿಸಿಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ ನಾವು ಅಂದರೆ ಹಿಂದಿನ ಸರ್ಕಾರದವರು ಅಸಿಸ್ಟೆಂಟ್ ಇಂಜನೀಯರ್ಸ್‌ಗೆ ಎಕ್ಸಿಕ್ಯೂಟೀವ್ ಇಂಜನೀಯರ್ಸ್ ಆಗಿ ಪ್ರೊಮೋಷನ್ ಕೊಟ್ಟಿದ್ದೇವೆ. ಇನ್ನು ಉಳಿದಂಥ 107 ಜನರಿಗೆ ಏನಾಗಿದೆ ಎಂದರೆ ಅವರು ರೋಸ್ಟರ್ ಸಿಸ್ಟಂ ಕೆಳಗೆ ಬರುತ್ತಾರೆ. ಆದರೆ ಸಾಮಾಜಿಕವಾಗಿ ಹೇಳುವುದೇನೆಂದರೆ, ಹೈಯರ್ ಕ್ಯಾಟಗರಿಸ್ ಅಲ್ಲದವರಿಗೆ ನ್ಯಾಯ ಸಿಗಬೇಕು. ಆ ದೃಷ್ಟಿಯಿಂದ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಬೇರೆ ಏನೂ ಇಲ್ಲ. ತಾವು ಡೈರೆಕ್ಟ್ ರಿಕ್ರೂಟ್‌ಮೆಂಟ್ ಕೂಡ ಈಗ ಮಾಡುತ್ತಿಲ್ಲ. ಇದರ ಬಗ್ಗೆ ಹೈಕೋರ್ಟಿಗೂ ಕೂಡ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ. ಆದ್ದರಿಂದ ತಾವು ಈಗ ಸದ್ಯಕ್ಕೆ ಹೊಸ ರಿಕ್ರೂಟ್‌ಮೆಂಟ್ ಮಾಡುವಂತಿ ಇಲ್ಲ. ರೂಲ್ 57ರ ಪ್ರಕಾರ ರೋಸ್ಟರ್ ಸಿಸ್ಟೆಂ ಮಾಡುವುದಕ್ಕೆ ತೊಂದರೆಯಾದರೆ ಅದಕ್ಕೆ ಅಮೆಂಡ್‌ಮೆಂಟ್ ಮಾಡಿ. ಆಗ ಯಾರಿಗೆ ತೊಂದರೆಯಾಗಿದೆಯೋ ಅವರಿಗೆ ಸಹಾಯವಾಗುತ್ತದೆ. ಈಗ ತಾವು ಸುಮಾರು 200-300 ಜನರಿಗೆ ಪ್ರೊಮೋಷನ್ ಕೊಟ್ಟಿದ್ದೀರಿ. ಈಗ ಎಸ್. ಸಿ. ಮತ್ತು ಎಸ್. ಟಿ. ಯವರಿಗೆ ರೋಸ್ಟರ್ ಸಿಸ್ಟೆಂ ಪ್ರಕಾರ ಸೂಪರಿಂಟಿಂಡಿಂಗ್ ಇಂಜಿನೀಯರ್ ಪೋಸ್ಟ್‌ಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ತಾವು ಅಮೆಂಡ್‌ಮೆಂಟ್ ಮಾಡಿ ಅದನ್ನು ಲಾ ಡಿಪಾರ್ಟ್‌ಮೆಂಟಿಗೂ ನುತ್ತು ಡಿ. ಪಿ ಎ ಆರ್. ಗೆ ಕಳುಹಿಸಿಕೊಟ್ಟರೆ ಅವರು ಲೀಗಲ್ ಆಗಿ ಸರಿಮಾಡುತ್ತಾರೆ ಈ ಫಾಲಿಸಿಯನ್ನು ಎಲ್ಲಾ ಇಲಾಖೆಗಳಲ್ಲಿ ಫಾಲಿಸಬಹುದು. ಈಗ ತಾವು ಸೀನಿಯಾರಿಟಿಯನ್ನು ಬದಲಾಣೆ ಮಾಡುವುದಕ್ಕೆ ಅಧಿಕಾರವಿಲ್ಲ. ತಾವು ಹೇಳಿದ ಪ್ರಕಾರ ರೋಸ್ಟರ್ ಸಿಸ್ಟಂನ್ನು ಅಳವಡಿಸಿಕೊಂಡು ಪ್ರೊಮೋಷನ್ ಕೊಟ್ಟಿದ್ದೀರಿ ತಾವು ಕೂಡ ವಿರೋಧಪಕ್ಷದಲ್ಲಿದ್ದಾಗ ಈ ವಿಷಯದ ಬಗ್ಗೆ ಸಾಕಷ್ಟು ಮಾತನಾಡಿದ್ದೀರಿ. ಮತ್ತು ನೀವುಕಾಟಿ ಮಂಡಳಿಗಳಲ್ಲಿ ನಾನ್ ಆಫಿಷಿಯಲ್ಸ್ ಇರಬೇಕೆಂದು ಕೂಡ ತಾವು ವಾದ ಮಾಡಿದಿರಿ. ಸೀನಿಯಾರಿಟಿ ಕಮ್ ಮೇರಿಟ್ ಎಂದು ಮಾಡಿದಾಗ ತಾವು ಅದರ ಬಗ್ಗೆ ಸಾಕಷ್ಟು ಹೋರಾಟ ಮಾಡಿದ್ದೀರಿ. ಆಗ ತನ್ನು ಸಲಹೆಯನ್ನು ನಾವು ಒಪ್ಪಿಕೊಂಡು ಸರಿಯಾದ ರೀತಿಯಲ್ಲಿ ಅಂದರೆ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಬದಲಾಣೆ ನುಡಿದೆವೆ. ತಾವು ಈಗ ಸಾಮಾಜಿಕವಾಗಿ ಯಾರಿಗೆ ನ್ಯಾಯ ಸಿಗಬೇಕೋ ಅವರಿಗೆ ನ್ಯಾಯವನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ ನಾನು ಕೂಡ ಶ್ರೀನಾನ್ ಮಲ್ಲಿಕಾರ್ಜುನಪ್ಪರ್ಗೆಯವರ ನೋಟೀಸಿನಲ್ಲಿ ಸಹಿ ಮಾಡಿ ಕಳುಹಿಸಿಕೊಟ್ಟಿದ್ದೇನೆ. ಆದ್ದರಿಂದ ನಾನು ಕೂಡ ಇದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರು ಈ ವಿಷಯದ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಗೋಳಿಂದ ಪಿ. ಒಡೆಯರಾಜ್ —ಸ್ವಾಮಿ ಇದುವರೆಗೂ ಮಾನ್ಯ ಸದಸ್ಯರಾದಂಥ ಶ್ರೀನಾನ್ ಬಂಗಾರಪ್ಪನವರು ನುತ್ತು ಶ್ರೀನಾನ್ ಮಲ್ಲಿಕಾರ್ಜುನ ಖರ್ಗೆಯವರು ಎಲ್ಲಾ ವಿಚಾರವನ್ನು ವಿಷದವಾಗಿ ತಿಳಿಸಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ರೋಸ್ಟರ್ ಸಿಸ್ಟಂಬಗ್ಗೆ ಒಂದು ಹೇಳಿಕೆಯನ್ನು ನಾಡಿದಾಗ

ಆ ಹೇಳಿಕೆ ಬಹಳ ಸ್ಪಷ್ಟವಾಗಿದೆಯೆಂದು ಗೊತ್ತಾಗುತ್ತದೆ. ಆದರೆ ಸಾಮಾಜಿಕ ನ್ಯಾಯ ಯಾರಿಗೆ ದೊರೆಯಬೇಕಾಗಿತ್ತೋ ಆ ನ್ಯಾಯ ದೊರೆತಿಲ್ಲ ಎನ್ನುವುದೇ ಮಾನ್ಯ ಸದಸ್ಯರ ಕೊರಗು. ಸರ್ಕಾರದ ನಿಯಮಾವಳಿಗಳ ಪ್ರಕಾರ ಆದಿಂದರೆ 1957ನೇ ಇಸವಿಯ ರೂಲ್ (4) 4 (ಎ) ಪ್ರಕಾರ ತಾವು ಈ ರೋಸ್ಟರ್ ಸಿಸ್ಟಂನ್ನು ಜಾರಿಗೆ ತಂದಿದ್ದೀರಿ ಆದರೆ ಇದರಿಂದ ಸಾಮಾಜಿಕ ನ್ಯಾಯ ದೊರೆಯುವುದಿಲ್ಲ. ಆದರಿಂದ ತಾವು ಈ ಬಂದು ನಿಯಮವನ್ನು ಬದಲಾವಣೆ ಮಾಡಬೇಕು ಈ ರೀತಿಯ ಬದಲಾವಣೆ ಮಾಡುವುದಕ್ಕೆ ಬೇಕಾದರೆ ಈ ಸಭೆಯ ವಿಶ್ವಾಸವನ್ನು ಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರ 1982ನೇ ಇಸವಿಯ ಆರ್ಡರನ್ನು ಇಲ್ಲಿ ಕೋಟಮಾಡಿ ಹೇಳಿದ್ದಾರೆ. ಆ ಆರ್ಡರ್‌ನಲ್ಲಿ ಸೀನಿಯಾರಿಟಿಯನ್ನು ಯಾವ ರೀತಿಯಲ್ಲಿ ಸಡಿಲಮಾಡಬೇಕೆಂದು ತಿಳಿಸುತ್ತದೆ. ಆದರೆ ಈಗ ನಾವು ಕೊಟ್ಟಿರತಕ್ಕಂಥದ್ದು ಯಾವುದೇ ಸೀನಿಯಾರಿಟಿ ಲಿಸ್ಟ್‌ನಲ್ಲಿರತಕ್ಕಂಥ ಹೆಸರು ಆಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ಅದು ನಮಗೂ ಗೊತ್ತಿದೆ ಆದರೆ ಅವರಿಗೆ ಪ್ರೋಮೋಷನ್ ಸೀನಿಯಾರಿಟಿ ಪ್ರಕಾರ ಬಂದಿದೆ.

ಶ್ರೀ ಬಿ. ಎಂ. ಯಡಿಯೂರಪ್ಪ.—ಸ್ವಾಮಿ, ನೀವು ತಪ್ಪು ಮಾಡಿದ್ದರೆ ಆ ತಪ್ಪನ್ನು ಒಪ್ಪಿಕೊಳ್ಳಿ, ಪರವಾಗಿಲ್ಲ

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಮಾನ್ಯ ಸದಸ್ಯರು 1982ನೇ ಇಸವಿಯ ಆರ್ಡರನ್ನು ಕೋಟ್ ಮಾಡಿ ಹೇಳಿದ್ದಾರೆ ಪ್ರತಿಯೊಂದು ಆರ್ಡರ್‌ನಲ್ಲೂ ಸ್ಪಷ್ಟೀಕರಣ ಮಾಡಿದ್ದೇನೆ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಆಸ್ಪಯ ಗೈದೇಶನ್ ಲಿಸ್ಟ್ ಮಾಡಿ ಪ್ರಮೋಶನ್ ಕೊಡತಕ್ಕದ್ದೆಂದು ನಿಭಂದನೆ 4.1 ಸೀನಿಯಾರಿಟಿ ರೂಲ್ಸ್ 52ರಲ್ಲಿ ಮಾಡಲಾಗಿದೆ. ಆದರ ಪ್ರಕಾರನೇ ಕೊಡಬೇಕೆಂದು ಹೇಳಿದ್ದೇನೆ. ಇದರ ಆಧಾರದ ಮೇಲೆ ಗೈದೇಶನ್ ಲಿಸ್ಟ್ ಮಾಡುವುದಾದು. ಇವತ್ತು ಇದನ್ನು ತಾವು ತಿದ್ದುಪಡಿ ಮಾಡಬೇಕೆಂದು ಹೇಳಿದ್ದೀರಿ. ಅದು ಪಾಲಿಸಿ ಡಿಸಿಶನ್ ಆಗುತ್ತದೆ. ಏಕೆಂದರೆ, ಹಿಂದೆ ದಿವಂಗತ ದೇವರಾಜ ಅರಸರವರು ಪ್ರಮೋಶನಲ್ ಕೋಟಾವನ್ನು ರಿಜರ್ವೇಶನ್ ಮಾಡಬೇಕೆಂದು ಹೇಳಿ ಆದನ್ನು ಈ ಸಭೆಯಲ್ಲಿ ತಂದಿದ್ದಾಗ ನಾವು ಇಲ್ಲಿ ಕೂತು ಸ್ವಾಗತ ಮಾಡಿದ್ದೇವೆ. ಇದರ ಬಗ್ಗೆ ಯಾರು ವಿರೋಧ ಮಾಡಿದ್ದಾರೆ ಎಂಬುದು ಈಗ ಬೇಕಾಗಿಲ್ಲ. ಆದರೆ ಜೂನಿಯರ್ ಕ್ಲಾಸ್ "ಒನ್" ಗೆ ಮಾತ್ರ ಈ ರೋಸ್ಟರ್ ಅನ್ವಯ ಮಾಡಬೇಕೆಂದು ತೀರ್ಮಾನ ವಿದ್ದು, ಅದು ಅಲ್ಲಿಂದ ಮುಂದಕ್ಕೆ ಹೋಗುವುದಿಲ್ಲ ಇವತ್ತು ತಾವು ಹೇಳಿದಿರಿ 107ನೇ ಯಸನು ಅಸಿಸ್ಟೆಂಟ್ ಇಂಜಿನೀಯರ್

ಶ್ರೀ ಮಲ್ಲಿಕಾರ್ಜುನ ಖರ್ಗೆ —ಜೂನಿಯರ್ ಕ್ಲಾಸ್ ಒನ್ ಇದ್ದರೂ ಕೂಡ ಇವತ್ತು ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಸೀನಿಯರ್ ಕ್ಲಾಸ್ ಒನ್ —

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಅಧಿಕಾರಿಗಳನ್ನು ಕರೆಸಿ ತುಂಬಾ ಚರ್ಚೆ ಮಾಡಿದ್ದೇನೆ. ಕ್ಲಾಸ್‌ಒನ್ ಜೂನಿಯರ್ ಪೋಸ್ಟ್ ಮಾತ್ರ ಇದಕ್ಕೆ ಸೀಮಿತವಾಗಿದೆ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ವರೆಗೆ ಪ್ರಮೋಶನ್ ಕೊಡತಕ್ಕಂಥ ಕಾಲದಲ್ಲಿ ರೋಸ್ಟರ್ ಅಪ್ಲೈ ಮಾಡಬೇಕೆಂದು ಸರ್ಕಾರದ ಹುಕುಂ ಇದೆ. ಇದರ ಪ್ರತಿಯನ್ನು ತಪ್ಪು ಕಡೆಗೆ ಕಳಿಸಿಕೊಡುತ್ತೇನೆ. ಎರಡನೇಯದು, ತಾವು ಒಂದು ಮಾತನ್ನು ಹೇಳಿದಿರಿ. ಏನೆಂದರೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಹುದ್ದೆಯ ಪೇಸ್ಕೇಲನ್ನು ಬದಲಾವಣೆ ಮಾಡುತ್ತೀರಾ ಎಂದು, ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಆದರೆ ಅಸಿಸ್ಟೆಂಟ್ ಇಂಜಿನೀಯರ್ಸ್‌ಗೆ ಮೆಡಿಕಲ್ ಗ್ರಾಜುಯೇಟ್ಸ್, ಡಿಪ್ಲೊಮಾ ಹಸ್ಬೆಂಡರಿ ಡಿಪ್ಲೊಮಾ ಕ್ಲರ್ಕರುಗಳಿಗಿಂತ ಸಂಬಳ ಜಾಸ್ತಿ ಇರುವುದರ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ ಆದರೆ ಸರ್ಕಾರ ಯಾವ ನಿರ್ಣಯವನ್ನೂ ಮಾಡಿಲ್ಲ ಆದರೆ ತಾವು ರೂಲ್ 4 1 ನ್ನು ಅಮೆಂಡ್ ಮಾಡಬೇಕೆಂದು ಹೇಳಿದ್ದು ಪಾಲಿಸಿ ಡಿಸಿಶನ್ ಆಗುತ್ತದೆ. ಅದನ್ನು ಸರ್ಕಾರ ನಿರ್ಣಯ ಮಾಡಬೇಕು. ನಾನು ವೈಯಕ್ತಿಕವಾಗಿ ಏನೂ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಇದನ್ನು ನೀವು ವೈಯಕ್ತಿಕವಾಗಿಯಾದರೂ ಒಪ್ಪುತ್ತೀರಲ್ಲ? ಗವರ್ನಮೆಂಟ್ ಆರ್ಡರ್‌ನಲ್ಲಿ ರೂಲ್ಸ್ 3-7 ರಲ್ಲಿ ಹೀಗೆ ಹೇಳಿದೆ—

"A reservation shall be made for each category of post and each promoting authority according to the percentage indicated in para 2 for purpose of calculating vacancies to be reserved for persons belonging to Sc/St, a rotation of 33 vacancies shall be followed for each category of post under each authority." ಆದರೆ ರೂಲ್ಸ್ 7ರಲ್ಲಿ ಏನು ಕೊಡುತ್ತೀರಿ, ಅದನ್ನು 3ರ ಪ್ರಕಾರ ವಾಪಸ್ ತೆಗೆದುಕೊಳ್ಳುತ್ತೀರಿ. ನೀವು ಏನು ಅನುಕೂಲ ಮಾಡಿ

ಕೊಟ್ಟ ಹಾಗಾಯಿತು ? ಈ ಅನುಕೂಲವನ್ನು ಜಾರಿ ಮಾಡುವುದಕ್ಕೆ ರೂಲ್ 7 ಅಡ್ಡ ಬರುತ್ತದೆ. interse Seniority amongst persons promoted on any occasion shall be determined in accordance with the rule, 4, 4 (a) ಆದರಿಂದ ಅದು ಪಾಲಿಸಿ ಮ್ಯಾಟರ್ ಆಗುತ್ತದೆ ಹಾಗೆಯೇ ಇಟ್ಟುಕೊಳ್ಳುತ್ತೇವೆ ಎಂದು ಹೇಳಿದರೆ ನಾವು ಒಂದು ವೇಳೆ ರೂಲ್ 3ರಲ್ಲಿ ರೊಟೇಶನ್ ಮೇನ್‌ಟೇನ್ ಮಾಡುವ ಉದ್ದೇಶ ಸಾಧ್ಯವಾಗದ ಹಾಗಾಗುತ್ತದೆ. ಆದ್ದರಿಂದ ಸರ್ಕಾರ ಫುನರ್ ವಿಚಾರಣೆಮಾಡಿ ಈ ರೂಲ್ 7 ರಿಂದ ಆತಂಕ ಬಾರದೇ ಇರುವ ರೀತಿಯಲ್ಲಿ ರೂಲ್ ಅನ್ನು ಜಾರಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ರೂಲ್ 7ನ್ನು ಪುನಃ ಅಮೆಂಡ್ ಮಾಡುವುದು ಅವಶ್ಯವಾಗಿದೆ. ತಾವು ಹೇಳಿದ್ದೀರಿ "ನಾನು ಮುಕ್ತ ಮನಸ್ಸಿನಿಂದ ಇದ್ದೇನೆ" ಎಂದು. ಆದ್ದರಿಂದ ಇದನ್ನು ಇನ್ನೂ ಕೂಡ ವಿಚಾರ ಮಾಡೋಣ. ಈ ಕ್ಯಾಟಗರಿಯಲ್ಲಿ ಆಯ್ಕೆಗೆ ಸ್ಪಷ್ಟಗಳು ಬಂದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಅವಂವರಿಗೆ ಅಲ್ಲಲ್ಲಿ ಸಿನಿಯಾರಿಟಿ ಬರುತ್ತಿತ್ತು. ಆದರೆ ಇದು ಆಗದೇ ಇರುವುದರಿಂದ ಅನೇಕ ಇಲಾಖೆಗಳಲ್ಲಿ ಈ ಪರಿಸ್ಥಿತಿ ಒದಗಿಬಂದಿದೆ. 1977ರಲ್ಲಿ ದಿವಂಗತ ದೇವರಾಜ್ ಅರಸುರವರದ ಇದನ್ನು ಮಾಡಬೇಕೆಂದು ಹೊರಟಾಗ ಎಲ್ಲೋ ಎಡವಿದಂತೆ ಕಾಣುತ್ತದೆ. ಇಲ್ಲದೇ ಹೋದರೆ ರೂಲ್ 3 ರಲ್ಲಿ 33 ರೊಟೇಶನ್ ಇಡಬೇಕೆಂದು ಹೇಳಿದ್ದು ರೂಲ್ 7 ರಲ್ಲಿ ಇದಕ್ಕೆ ಸಹಾಯವಾಗುವುದಿಲ್ಲ ಎಂದ್ ತಾವು ಮನಗಂಡಿದ್ದೀರಿ. ತಾವು ಪುನಃ ಯೋಜನೆಮಾಡಿ ಇದನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಪಡತಕ್ಕಂತಾದ್ದು ಬಹಳ ಒಳ್ಳೆಯದು. ಇಲ್ಲದೇ ಹೋದರೆ ನಾನು ಹೇಳುತ್ತೇನೆ, ಇಂಟರ್‌ಸ್ಟೇಟ್ ಸಿನಿಯಾರಿಟಿ ಲಿಸ್ಟ್‌ನಲ್ಲಿ ಹಾಗೆ ಕೊಡುವುದಕ್ಕೆ ಬರುತ್ತದೆ. ಎಲಿಜಬಲ್ ಕ್ಯಾಂಡಿಡೇಟ್ 101ನೇ ಯವನು ಇರಬಹುದು. ಪ್ರೊಮೋಷನ್ ಕೊಡುವಾಗ ಮೇಲೆ ಇದ್ದವನು 91-95 ರವರೆಗೆ ಬಂದರೆ ಬಾಕಿಯವರಿಗೆ ಅನ್ಯಾಯವಾದಂತೆ ಕಾಣುತ್ತದೆ. ಸುಪ್ರೀಂ ಕೋರ್ಟ್ ತೀರ್ಮಾನ ಪ್ರಕಾರ ಆರ್ಟಿಕಲ್ 4ಕ್ಕೆ ಅನ್ಯಾಯ ಆಗುವುದಿಲ್ಲ. ಸೆಲೆಕ್ಷನ್ ಪೋಸ್ಟ್ ಕೊಡುವಾಗ ಇದೊಂದು ತೊಂದರೆ ಇದೆ. ಆದರಿಂದ ತಾವು ದೊಡ್ಡ ಮನಸ್ಸು ಮಾಡಿ ರೂಲ್ 3ರಲ್ಲಿ ಈ ಅನುಕೂಲವನ್ನು ದೊರಕಿಸಿಕೊಟ್ಟರೆ ಅದನ್ನು ಜಾರಿಗೆ ತರುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಮಾನ್ಯ ರಂಗನಾಥ್‌ರವರು ಹೇಳಿದ್ದನ್ನು ಸ್ವಾಗತಿಸುತ್ತೇನೆ ರೂಲ್ 3ರಲ್ಲಿ ನಾವು ಬೆನಿಫಿಟ್ ಕೊಟ್ಟರೆ ಅದನ್ನು ರೂಲ್ 7ರಿಂದ ಹಿಂದಕ್ಕೆ ತೆಗೆದುಕೊಂಡತಾಗುತ್ತದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ನಾನು ಮೊದಲೇ ಹೇಳಿದ್ದೇನೆ. ರೋಸ್ಟರ್ ಪಾಯಿಂಟ್‌ಗಳು ಮಾಡುವುದು ಸಿನಿಯಾರಿಟಿ ಫಿಕ್ಸ್ ಮಾಡಲಿಕ್ಕೆ ಅಲ್ಲ. ಪ್ರಮೋಶನ್ ಕೋಟಾವನ್ನು ಮೇಕ್‌ಅಪ್ ಮಾಡಲಿಕ್ಕೆ ಇದು ಇದೆ. ಇದನ್ನು ಹಿಂದೆ ಮಾಡಿದ್ದಾರೆ, ನಾವು ಮಾಡಿದ್ದು ಅಲ್ಲ. ಹಿಗೇ ಮೇಕ್‌ಅಪ್ ಮಾಡತಕ್ಕಂಥ ಕಾಲದಲ್ಲಿ ಸರ್ವಿಸ್ ಸಿನಿಯಾರಿಟಿ ಫಿನಿದೆ ಆದರಲ್ಲಿ ಒಂದು ಕಡೆ 4-1 ನಿಬಂಧನೆಯನ್ನು ಕೂಡ ಮಾಡಿದ್ದೇವೆ. 44 ಜನರಿಗೆ ಪ್ರಮೋಷನ್ ಕೊಟ್ಟು ಕೊನೆಯ ಐದಾರು ಜನ ಎಸ್. ಸಿ. ಎಸ್. ಟಿ. ಯವರು ಬಂದಿದ್ದಾರೆ. 46 ನೇ ಯವನನ್ನು 25 ವರ್ಷ ಸರ್ವಿಸ್ ಮಾಡಿದವನು ಬರುತ್ತಾನೆ ಆ ಮನೆಯಲ್ಲಿ ಈ ಸಂಬಂಧವಾಗಿಯೇ ಪ್ರಶ್ನೆ ಬಂದಿತ್ತು. ನಾನು ಇದಕ್ಕೆ ಕೌಂಟರ್ ಆಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ 45ನೇ ಯವನು ಬರುತ್ತಾನೆ. ಅವನು ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್ ಆಗಿ 21-22 ವರ್ಷ ಕೆಲಸ ಮಾಡಿದವನು 46ನೇ ಯವನಾಗಿ ಬರುತ್ತಾನೆ. 44ರಲ್ಲಿ ಕೊಟ್ಟವರಿಗೆ ಆಗಿರುವುದು ಮೂರು ವರ್ಷ ಸರ್ವಿಸ್ ಮಾತ್ರ. ಇದನ್ನು ಹಿಂದಿನ ಸರ್ಕಾರ ಮಾಡಿದು. ಇದರ ಬಗ್ಗೆ ನಾನು ಮುಕ್ತ ಮನಸ್ಸಿನಿಂದ ಇದ್ದೇನೆಂದು ಮೊದಲೇ ಹೇಳಿದ್ದೇನೆ. 10-2-82ರಲ್ಲಿ ಹಿಂದಿನ ಸರ್ಕಾರ ಒಂದು ನಿರ್ಣಯ ಮಾಡಿತು. ಅವತ್ತು 60 ಜನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್‌ಗಳನ್ನು ಪ್ರಮೋಶನ್ ಮಾಡತಕ್ಕಂಥ ಕಾಲದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್ ಆಗಿ ಐದು ವರ್ಷ ಸರ್ವಿಸ್ ಮಾಡಿದವರು ಯಾರು ಇರಲಿಲ್ಲ ಆದ್ದರಿಂದ ಆ 60 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಒಂದು ಟೈಮ್ ಕನ್ಸೆಶನ್ ಕೊಡಬೇಕೆಂದು ಸಚಿವ ಸಂಪುಟದಲ್ಲಿ ಒಂದು ತೀರ್ಮಾನವನ್ನು ಕೈಗೊಳ್ಳಲಾಯಿತು. One time concession to reduce the service by 3 years. ಎಂದು

ಶ್ರೀ ಕೆ. ಹೆಚ್. ರಂಗನಾಥ್.—ಹಿಂದೆ ಕೋ ಆಪರೇಟಿವ್ ಇಲಾಖೆಯನ್ನು ತೆಗೆದು ಕೊಂಡರೆ, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನ್ನು ತೆಗೆದುಕೊಂಡರೆ ಈಗಿರತಕ್ಕಂಥ ಡೈರೆಕ್ಟರರೂ, ಜಾಯಿಂಟ್ ಡೈರೆಕ್ಟರಗೂ ಮೂರು ವರ್ಷ ಸರ್ವಿಸ್ ಎಂದು ಮಾಡಿಕೊಂಡಿದ್ದನ್ನು ನೋಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—10-8-82 ರಂದು ತಾವು ನಿರ್ಣಯ ತೆಗೆದು ಕೊಂಡಿರತಕ್ಕಂತಾದ್ದು. ಒನ್ ಟೈಮ್ ಕನ್ಸೆಶನ್ ಅನ್ನು ಕ್ಯಾಬಿನೇಟ್‌ನಲ್ಲಿ ತೀರ್ಮಾನ ಮಾಡಿದ್ದಾರೆ. ಈಗ ಎರಡು ಪ್ರಮೋಶನ್ ಕೊಟ್ಟಿದ್ದೇವೆ. ಒಂದು 172 ಜನ, ಇನ್ನೊಂದು 27 ಜನರಿಗೆ ಪ್ರಮೋಶನ್ ಕೊಟ್ಟಿದ್ದೇವೆ.

ಇನ್ನೆರಡರಲ್ಲೂ ಐದು ವರ್ಷ ಸೇವಾ ಅವಧಿ ಇರುವುದನ್ನು ನೂರು ವರ್ಷಕ್ಕೆ ಸೀಮಿತ ಮಾಡಿ ಕೊನೆಯ ಪ್ರಮೋಷನ್ ಕೊಡಬೇಕಾದರೆ ಮೂರು ವರ್ಷ ವಿಳಂಬವಾಗುತ್ತದೆ. ಇವತ್ತು ಅಪ್ಪರ್ ಕೃಷ್ಣಜಲದಲ್ಲಿ ನಲ್ವತ್ತು ಹುದ್ದೆಗಳು ಖಾಲಿ ಬಿದ್ದಿವೆ. ಈಗ ರಿಯಾಯ್ತಿ ಕೊಡಬಾರದೆಂದು ಸಿ ಅಂಡ್ ಆರ್ ರೂಲ್ಸ್‌ನ್ನು ಮಾಡಬೇಕೆಂದು ಕೂಡ ಚರ್ಚೆಗೆ ಬಂತು.

1-30 p. m

ಅದರ ಬಗ್ಗೆ ನಾನು ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ. ಆತುರದ ನಿರ್ಣಯ ತೆಗೆದುಕೊಳ್ಳುವುದು ಬೇಡ ಎಂದು ಅದನ್ನು ಮುಂದೂಡಿ, 1, 2 ಮತ್ತು 22 ಹುದ್ದೆಗಳಿಗೆ ನಾವು ಬಿಡ್ತಿ ಕೊಟ್ಟಿದ್ದವು ಆನೆ ಮೂರು ವರ್ಷದ ಸೇವಾ ಅವಧಿ ಇನಿದೆಯೋ ಅದನ್ನೇ ಗಣನೆಗೆ ತೆಗೆದುಕೊಂಡು ಕೊಟ್ಟಿದ್ದೇವೆ. ಮೊದಲಿದ್ದ ವರ್ಗದವರಿಗೆ ರಿಸರ್ವೇಷನ್ ಇದೆಯೇ ಎಂದು ನೀವು ಕೇಳಿದಾರೆ ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಅನ್ವಯವಾಗಬಾರದು ಎಂಬ ಉದ್ದೇಶದಿಂದ ಯಾವರೀತಿ ಕ್ರಮ ತೆಗೆದುಕೊಂಡಿಡೆ ಎಂಬುದನ್ನು ಮುಖ್ಯಮಂತ್ರಿಗಳು ಹೇಳಿದಾರೆ. 194 ಜನ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳಿಗೆ ಎರಡು ಕಂತುಗಳಲ್ಲಿ ನೀವು ಬಿಡ್ತಿ ಕೊಟ್ಟಿದ್ದೇವೆ, ಅದರಲ್ಲಿ ಆನರ ಸಕ್ಕುಗಳನ್ನು ಉಳಿಸಿದ್ದೇವೆ. **4(1) Service seniority rules** ತಿದ್ದುಪಡಿ ಮಾಡಬೇಕೆಂದು ನೀವು ಸದಸ್ಯರು ಹೇಳಿದಾರೆ, ಆ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳುತ್ತೇನೆ. ಆದರೆ ಈಗ ಪ್ರಮೋಷನ್ ಮಾಡಿರತಕ್ಕದ್ದರಲ್ಲಿ ಯಾವ ಆನ್ಯಾಯನೂ ಆಗಿಲ್ಲವೆಂದು ಹೇಳುತ್ತೇನೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ —ತಾವು ಮನಸ್ಸು ಮಾಡಿದರೆ

ಶ್ರೀ ಎಚ್. ಡಿ. ದೇವೇಗೌಡ: —ಮುಕ್ತ ವಾತಾವರಣದಲ್ಲಿ ಈ ವಿಷಯ ನಿರ್ಣಯ ಮಾಡಲಿಕ್ಕೆ ನಾನು ಸಿದ್ಧವಿದ್ದೇನೆ. ಬಂದು ಮಾತ್ರ ಸ್ಪಷ್ಟೀಕರಣ ಮಾಡುತ್ತೇನೆ, ಈ ಜಾಗದಲ್ಲಿ ಕುಳಿತು ನಿರ್ಣಯ ತೆಗೆದು ಕೊಂಡಿರುವ ಕಾಲದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಏನಾದರೂ ಸೆಟ್ಟು ಬಿದ್ದಿದೆ ಎಂದು ಹೇಳಿದರೆ ಆಮ ಕ್ಷಣಕ್ಕೆ ಹೊರಹಾಕುವುದು ಎಂದು ಹೇಳುತ್ತೇನೆ ನಾನು ಈ ವಿಷಯವನ್ನು ಯಾವ ಸಂದರ್ಭದಲ್ಲಿ ಬೇಕಾದರೂ ಚರ್ಚಿಸಲು ಸಿದ್ಧನಾಗಿದ್ದೇನೆ. ಬೇಕಾದರೆ ಎಲ್ಲ ಅಧಿಕಾರಿಗಳನ್ನೂ ಕರೆಸಿ ಚರ್ಚೆ ಮಾಡೋಣ. ದೇವೇಗೌಡರು ಮುಂದುವರೆಸಿ ಸಮಾಜದವರು, ಅವರು ಅಲ್ಲಿ ಕುಳಿತುಕೊಂಡು ಅದಲುಬದಲು ಮಾಡುತ್ತಾರೆ ಎಂದು ಹೇಳುವ ಸನ್ನಿವೇಶ ಬರಬಾರದು. 1978 ರಲ್ಲಿ ರೋಸ್ಟರ್ ಸಿಸ್ಟಂ ಜಾರಿಗೆ ತರುವಾಗ ನೀವು ನಿಯಮಗಳನ್ನು ಅಳವಡಿಸಿದರು ಆದಕ್ಕೆ ಅನುಗುಣವಾಗಿ ನಾವು ಇವತ್ತು ನಿರ್ಣಯ ತೆಗೆದುಕೊಂಡಿದ್ದೇವೆ. ಸೆಕ್ಷನ್ 4 (1) ನಿಯಮವನ್ನು ಸಡಿಲಗೊಳಿಸುವ ಬಗ್ಗೆ ನೀವು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ.—ನಿತಕ್ಕೆ ಈ ಮಾತು ಬರುತ್ತಿದೆ ಎಂದರೆ, 1962 ರ ನಂತರ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳಿಗೆ ನೇರವಾಗಿ ರೆಕ್ರೂಟ್‌ಮೆಂಟ್ ಆಗಿಲ್ಲ ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ! ಭಾಗ ಪ್ರತಿ ಇಲಾಖೆಯಲ್ಲಿ ನೇರವಾಗಿ ರೆಕ್ರೂಟ್‌ಮೆಂಟ್ ಆಗಬೇಕೆಂದಿದ್ದರೂ ಎಲ್ಲ ಇಲಾಖೆಗಳಲ್ಲಿ ಅದು ಆಗಿಲ್ಲ ಅಪೇರೀತಿ ಇಲ್ಲೂ ಆಗಿಲ್ಲ. ಹೀಗಾಗಿ ಎಲ್ಲ ವರ್ಗದ ಜನರಿಗೆ ತೊಂದರೆಯಾಗಿದೆ. ಅದರಲ್ಲೂ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್‌ನವರಿಗೆ ಹೆಚ್ಚು ತೊಂದರೆಯಾಗಿದೆ. ಇವರಿಗೆ ಸಿತಕ್ಕೆ ಹೆಚ್ಚು ತೊಂದರೆಯಾಗಿದೆ ಎಂದು ಕೇಳಿದರೆ ಈ ಕಾರಣದಿಂದಲೇ ಇವರಿಗೆ ನಾವೂಷಾ ನೀವು ಬರಬೇಕಾಗಿತ್ತೋ ಅದು ಬಂದಿಲ್ಲ. ಈ ಪರಿಸ್ಥಿತಿಯಲ್ಲಿ ಸೆಲೆಕ್ಷನ್ ಮಾಡುವುದರಿಂದ ಅವನ್ನು ಭರ್ತಿ ಮಾಡುವುದಕ್ಕೆ ಆಗುತ್ತದೆ. ಪ್ರತಿ ಇಲಾಖೆಯಲ್ಲೆ ವರ್ಷದ ಅಂತ್ಯದಲ್ಲಿ ಎಲ್ಲೆಲ್ಲಿ ನೇಕೆನ್ಸಿ ಬರುತ್ತದೆ ಎಂಬುದನ್ನು ಕ್ಲಾಸಿಫೈ ಮಾಡಿ ಅಡ್ವರ್ಟೈಸ್ ಮಾಡಿ ಭರ್ತಿ ಮಾಡಿದರೆ ಈ ಪರಿಸ್ಥಿತಿ ಬರುವುದಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ಡೈರೆಕ್ಟ್ ರೆಕ್ರೂಟ್‌ಮೆಂಟ್ ಆಗಿರಲಿಲ್ಲ ಎಂಬುದು ನಿಜ. ಇದಕ್ಕೆ ಕಾರಣ ಹಲವಾರು ಇನ್ನೆ ಆದರೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಬಗ್ಗೆ ತಾವು ಹೇಳಿದ ಕಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಏಕೆಂದರೆ ಆದಕ್ಕೆ ಸಾಕಷ್ಟು ಎಳೆತ ಕೆಳೆತ ಎರಡೂ ಇರುವುದು ತನುಗೆ ಗೊತ್ತಿದೆ 20—22 ವರ್ಷ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಕೆಲಸ ಮಾಡಿರುವವನಿಗೂ ಪ್ರಮೋಷನ್ ನಿಗುವುದಿಲ್ಲ ಎಂಬ ನಾದ ಮಾಡುವವರಿದ್ದಾರೆ. ಇನ್ನೂ ಕೆಲವರು ಹೈ ಕೋರ್ಟಿನಲ್ಲಿ ಪ್ರಶ್ನೆ ಮಾಡಿದಾರೆ. ಈ ಕಾರಣದಿಂದ ಕಳೆದ 16 ವರ್ಷಗಳಿಂದ ಲೋಕೋಪಯೋಗಿ ಇಲಾಖೆಯಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಆಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—30 ವರ್ಷದಿಂದ ಒಬ್ಬ ಶಿರಸ್ತೇದಾರನಾಗಿ ದುಡಿದಿರುತ್ತಾನೆ. ಅವನ ಮೇಲೆ ಐ. ಎ. ಎಸ್. ಅಧಿಕಾರಿ ಅಸಿಸ್ಟೆಂಟ್ ಕಮಿಷನರಾಗಿರೋ ಅಥವಾ ಜೆಸ್ಟೆಟ್ ಕಮಿಷನ್ನರಾ

ಗಿಯೋ ಬರುತ್ತಾರೆ. ಆಗ ಅವನು ನನಗಿಂತ ಕಡಿಮೆ ಸರ್ವೀಸ್ ಆಗಿರುವವನು ನನ್ನ ಮೇಲೆ ಬಂದಿದ್ದಾನೆ ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.--ನಾನು ಇರತಕ್ಕ ವಾಸ್ತವಾಂಶವನ್ನು ಹೇಳಿದ್ದೇನೆ. ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುವ ಬಗ್ಗೆಯೂ ನಿರ್ಣಯ ಮಾಡುತ್ತೇವೆ. ಈ ವಿಷಯದಲ್ಲಿ ಪಾಲಿಸಿ ನಿರ್ಣಯ ಆಗಬೇಕೆಂಬುದನ್ನು ತಾವೂ ಒಪ್ಪುತ್ತೀರಿ ಎಂದು ಭಾವಿಸಿದ್ದೇನೆ. ನಾವು ಈಗಿರತಕ್ಕ ವ್ಯವಸ್ಥೆಗನುಗುಣವಾಗಿ ನಿರ್ಣಯ ಮಾಡಿದ್ದೇವೆ. ಈಗ ಮಾಡಿರುವುದರಲ್ಲಿ ಯಾವುದೇ ಅನ್ಯಾಯ ನಡೆದಿಲ್ಲ. ಆದರೆ ತಾವು ಹೇಳಿರತಕ್ಕ ನೀತಿಯ ಬಗ್ಗೆ ಕಾಳಜಿ ವಹಿಸುತ್ತೇವೆ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಸಚಿವರು ಅನ್ಯಾಯವಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ಪ್ರಕಾರ ಅನ್ಯಾಯವಾಗಿದೆ ಎಂಬುದು ನಮ್ಮ ಅಭಿಪ್ರಾಯ. ಇಲ್ಲಿ ಚರ್ಚೆ ಮಾಡಿ ಕಾಲ ವ್ಯಯ ಮಾಡುವುದಕ್ಕಿಂತ ಸಚಿವರು ಸಲಹೆ ಮಾಡಿದಂತೆ ನಮ್ಮನ್ನು ಕರೆದು ಮಾತುಕತೆ ನಡೆಸಿ ತೀರ್ಮಾನ ಮಾಡುವುದು ಒಳ್ಳೆಯದು. ಎಲ್ಲ ವಿಚಾರಗಳ ಬಗ್ಗೆಯೂ ಆ ಕಡೆ ಭಾಗದ ಶಾಸಕರು, ಈ ಕಡೆಯ ಶಾಸಕರು ಮತ್ತು ಅಧಿಕಾರಿಗಳು ಎಲ್ಲರನ್ನೂ ಕರೆದು ಚರ್ಚೆ ಮಾಡಿ ಎಲ್ಲರ ಅಭಿಪ್ರಾಯ ತೆಗೆದುಕೊಂಡರೆ ಮಂತ್ರಿ ಮಂಡಲದಲ್ಲಿ ಸರ್ಕಾರದ ವತಿಯಿಂದ ತೀರ್ಮಾನ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.--ಮಾನ್ಯ ಬಂಗಾರಪ್ಪನವರು ಯಾವ ವಿಷಯವನ್ನು ಸಮರ್ಥನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೋ, ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಯಾರಿಗೂ ಅನ್ಯಾಯವಾಗಿಲ್ಲ ಎಂದು ನಾನು ಹೇಳಿದ್ದೇನೆ. ಯಾರಾದರೂ ಒಬ್ಬ ಅಧಿಕಾರಿಗೆ ಸೀನಿಯಾರಿಟಿಯಲ್ಲಿ ಅನ್ಯಾಯವಾಗಿದೆ ಎಂಬುದನ್ನು ದೃಢೀಕರಿಸುವುದಾದರೆ ನಾನು ಈ ಸಭೆಯಲ್ಲಿ ನಿಮ್ಮ ಮುಂದೆ ಕ್ಷಮೆ ಕೇಳುತ್ತೇನೆ. ಜೊತೆಗೆ ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.--ತಾವು ಮಾಡಿದ್ದೀರಿ ಎಂದು ಹೇಳುತ್ತಿಲ್ಲ. ಈ ಮೆಥಡ್ ಅಡಾಪ್ಟ್ ಮಾಡುವುದರಿಂದ ಅವರಿಗೆ ಅನ್ಯಾಯವಾಗುತ್ತಿದೆ ಎಂಬುದನ್ನು ಹೇಳುತ್ತಿದ್ದೇವೆ. ದೇವೇಗೌಡರು ಅನ್ಯಾಯ ಮಾಡಿದ್ದಾರೆಂದು ನಾವು ಹೇಳುತ್ತಿಲ್ಲ.

ಶ್ರೀ ಎಚ್. ಗಂಗಾಧರನ್.--ಹಿಂದಿನ ಸರ್ಕಾರ ಮಾಡಿದ ರೂಲ್‌ನಿಂದ ಅನ್ಯಾಯವಾಗುತ್ತದೆಂದು ಹೇಳುತ್ತಿದ್ದಾರೆ.

ಶ್ರೀ ಕೆ. ಪಿ. ಶಾಂತಮೂರ್ತಿ.--ಅದನ್ನು ತಿದ್ದುಪಡಿ ಮಾಡಿ ಈಗ ಎಂದು ನಾವು ಹೇಳುತ್ತಿರುವುದು.

ಶ್ರೀ ಎಚ್. ಗಂಗಾಧರನ್.--ರೂಲ್ ತಿದ್ದುಪಡಿ ಮಾಡಿ ಸರಿ ಮಾಡಿ ಎಂಬುದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಡಿ. ದೇವೇಗೌಡ.--ಯಾರಾದರೂ ಅಧಿಕಾರಿಗಳಿಗೆ ಅನ್ಯಾಯವಾಗಿದ್ದರೆ ಈಗಲೇ ಕರೆಸಿ, ಕುಳಿತು ಚರ್ಚೆಮಾಡೋಣ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.--ವೈಯಕ್ತಿಕವಾಗಿ ಯಾರ ಬಗ್ಗೆಯೂ ನಾವು ಹೇಳಲಿಲ್ಲ. ಗ್ರೇಡೇಷನ್ ಲಿಸ್ಟ್ ಬಗ್ಗೆ ನಮ್ಮ ವಾದ ಇಲ್ಲ. ಏಕತಕ್ಕೆಂದರೆ 4 (1) ರಲ್ಲೇ ಆ ರೀತಿ ಇದೆ. ಆ ರೂಲ್ ನಿಂದ ತೊಂದರೆಯಾಗಿರುವುದರಿಂದ ಅದನ್ನು ತಿದ್ದುಪಡಿ ಮಾಡಲು ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಲು ವಿಾಟಿಂಗ್ ಕರೆಸುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.--ಸರ್ಕಾರ ಆ ಬಗ್ಗೆ ಪರಿಶೀಲನೆ ಮಾಡುತ್ತದೆಂದು ಹೇಳಿದ್ದೇನೆ. ನಾನು ಕೇವಲ ಒಂದು ವರ್ಗದ ಅಧಿಕಾರಿಗಳು ಕೊಟ್ಟ ಸಲಹೆಯನ್ನು ತೆಗೆದುಕೊಂಡಿಲ್ಲ. ಮಾನ್ಯ ಕೆ. ಎಚ್. ರಂಗನಾಥ್ ಅವರು ಇಲ್ಲಿದ್ದಾರೆ., ಅವರು ಮಂತ್ರಿಗಳಾಗಿ, ಸಭಾಧ್ಯಕ್ಷರಾಗಿ ಕೆಲಸ ಮಾಡಿರುವುದರಿಂದ ಅವರಿಗೆ ಗೊತ್ತಿದೆ. ಸೆಕ್ರೆಟರಿಯೇಟ್‌ನಲ್ಲಿ ಒಂದೊಂದು ಸಾರಿ ತನುಗೆ ಬೇಕಾದ ರೀತಿಯಲ್ಲಿ ರೂಲ್ಸ್ ಬದಲಾವಣೆ ಮಾಡಿರುವ ಬಗ್ಗೆ ಚರ್ಚೆ ಮಾಡಿದ್ದೇವೆ. ಆದ್ದರಿಂದ ನಾವು ನಿರ್ಣಯ ಮಾಡುವಾಗ ನಾಳೆ ಯಾವುದೇ ಆಪಾದನೆ ಬರಬಾರದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಿದ್ದೇವೆ. ಯಾವುದೇ ನಿರ್ಣಯ ತೆಗೆದುಕೊಳ್ಳುವಾಗ ಪರಿಶಿಷ್ಟ ಸಮಾಜದ ನಿಮ್ನ ವರ್ಗದವರಿಗೆ ಯಾರಿಗೂ ಅಪಾಯವಾಗದಂತೆ ನಿರ್ಣಯ ತೆಗೆದುಕೊಳ್ಳಬೇಕೆಂದು ನಾನು ಪದೇ ಪದೇ ಅಧಿಕಾರಿಗಳಿಗೆ ಒತ್ತಿ ಒತ್ತಿ ಹೇಳಿದ್ದೇನೆ. ಮಾನ್ಯ ಶಿವಲಿಂಗಯ್ಯನವರು ಏನು ರಿಜಿಸ್ಟರ್ ಮೈಂಟೇನ್ ಮಾಡಿದ್ದಾರೆ, ಅದನ್ನೂ ಸಭೆಯ ಮುಂದಿಡುವುದಕ್ಕೆ ನಾನು ಸಿದ್ಧ. ರೂಲ್ 4 (1) ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.--ಈ ಸದನದ ಕಾಲ ಬಹಳ ಬೆಲೆಯುಳ್ಳದ್ದು ಎಂಬ ದೃಷ್ಟಿಯಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗಲಿಲ್ಲ. ತಮ್ಮ ಪ್ರಕಾರ ಅನ್ಯಾಯ ಆಗಿಲ್ಲ ಎಂದು ಹೇಳಿದ್ದೀರಿ. ಅದು ನಿಮಗೆ ಮನಪರಿಕೆಯಾಗಿರಬಹುದು. ಆದರೆ ನಮ್ಮ ಅಭಿಪ್ರಾಯವನ್ನು ನಾವು ಸ್ಪಷ್ಟಪಡಿಸಿದ್ದೇವೆ. ಹೆಚ್ಚಿಗೆ

ಚರ್ಚೆ ಮಾಡಿದರೆ ಕಾಲ ವ್ಯಯ ವಾಗುತ್ತದೆಂದು ನಾನು ಸಲಹೆ ಮಾಡಿದೆ. ಈ ಕಾರಣದಿಂದ ನಮ್ಮೆನ್ನು ಕರೆದು ಮಾತನಾಡುತ್ತೇನೆಂದು ನೀವೇ ಹೇಳಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.- ನಾನು ಕೊಟ್ಟಿರುವ ಲಿಸ್ಟ್‌ನಲ್ಲಿ ಅನ್ಯಾಯವಾಗಿದ್ದರೆ ಇವತ್ತೇ ವೋಟಿಂಗ್ ಕರೆಸುತ್ತೇನೆ, ೧೮ಜನರ ಪಟ್ಟಿಯಲ್ಲಿ ಯಾವುದೇ ಅಧಿಕಾರಿ ಅನ್ಯಾಯವಾಗಿದೆ ಎಂದು ಹೇಳಿದರೆ ನಾನು ತಪ್ಪು ಒಪ್ಪಿಕೊಳ್ಳುತ್ತೇನೆ. ಇವತ್ತೇ ಬೇಕಾದರೆ ವೋಟಿಂಗ್ ಕರೆಸುತ್ತೇನೆ. ಅದರ ಬಗ್ಗೆ ವಾದ ಬೇಡ ಎನ್ನುವುದಾದರೆ, 4 (1) ನಿಯಮವನ್ನು ತೆಗೆಯಬೇಕೇ ಬೇಡವೇ ಎಂಬ ಬಗ್ಗೆ ತಮ್ಮ ಸಲಹೆಯನ್ನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಇದು ಯಾರೋ ಒಬ್ಬ ಅಧಿಕಾರಿಯ ಪ್ರಶ್ನೆಯಲ್ಲ. ಇದನ್ನು ಫ್ಯಾಚರ್ ಗೈಡೆನ್ಸ್‌ಗೆ ಇಟ್ಟು ಕೊಳ್ಳಬೇಕಾಗುತ್ತದೆ ಕರೆಸಿ ಚರ್ಚೆ ನಡೆಸಿದಾಗ ಒಂದು ವೇಳೆ ಸರಿಯಾಗಿಲ್ಲ ಎಂಬುದು ಮನನವಿಕೆಯಾದರೆ ಬದಲಾವಣೆ ಮಾಡುವುದಕ್ಕೆ ನನು ತೊಂದರೆಯಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ — ಬದಲೇ ಸಾರಿ ವಾಗಾನ ಕೊಡುವುದಕ್ಕಾಗುವುದಿಲ್ಲ. ಇವತ್ತು ಇರತಕ್ಕ 4 (1) ನಿಯಮವಳಿಯನ್ನು ಡಿಲಿಟ್ ಮಾಡಬೇಕೆಂದು ನನು ಹೇಳುತ್ತಿದ್ದೀರೋ ಅದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ನಿರ್ಣಯ ಮಾಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1983-84 ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

†ಶ್ರೀ ಜೆ. ಡಿ ಸೋಮಪ್ಪ(ಸಕಲೇಶಪುರ).— ಸನ್ಮಾನ್ಯ ಅಧ್ಯಕ್ಷರೇ, 1983-84 ನೇ ಸಾಲಿಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಆರ್ಥಿಕ ಮುಂಗಡ ಪತ್ರವನ್ನು ಈ ಸಭೆಯ ಮುಂದೆ ನನು ಮುಂಡಿಸಿದಾರೆ ಇದು ನಿರಾಶದಾಯಕವಾದ ಮುಂಗಡಪತ್ರವಾಗಿರುವುದರಿಂದ ಅದನ್ನು ನಾನು ವಿರೋಧಿಸುತ್ತೇನೆ ಕರ್ನಾಟಕ ರಾಜ್ಯದ ಜನತೆ ಈ ಬಗ್ಗೆ ನನು ಆಕ್ಷೇಪಣೆಗಳನ್ನು ಹೊಂದಿದ್ದರೋ, ನನು ಆಸಕ್ತಿಯನ್ನು ತಳೆದಿದ್ದರೋ, ಈ ಸಾಲಿನ ಆಯವ್ಯಯ ಪತ್ರದಲ್ಲಿ ನನು ನೀರಿಕ್ಷಿಸಿದ್ದರೋ ಅವೆಲ್ಲಾ ನಿರಾಶಾದಾಯಕವಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಕರ್ನಾಟಕ ರಾಜ್ಯದಲ್ಲಿ ಪ್ರಥಮವಾಗಿ ಈ ಬಂದು ಜನತಾ ಸರ್ಕಾರದ ಮುಂಗಡ ಪತ್ರವನ್ನು ಕೊಡುವುದಕ್ಕೆ ಕರ್ನಾಟಕದ ಜನರು ಅವಕಾಶ ಮಾಡಿಕೊಟ್ಟಿದಾರೆ. ಹಾಗಿರುವಾಗ ಈ ಮುಂಗಡ ಪತ್ರವನ್ನು ನೋಡಿದಾಗ ನನುಗೆ ನನು ಅನಿಸುತ್ತದೆ ಎಂದರೆ ಸರ್ಕಾರ ಇದರಲ್ಲಿ ಏಂಬಿಸಿದೆ ಅನ್ನುವ ಮಾತನ್ನು ಈ ಸಭೆಗೆ ಹೇಳಲು ನಾನು ಇಚ್ಛಿಸುತ್ತೇನೆ. ಪ್ರಥಮವಾಗಿ ಹೇಳಬೇಕಾದರೆ ಜನತಾ ಪಕ್ಷದ ಪ್ರಣಾಳಿಕೆ ನೋಡಿದಾಗ ಜನತಾ ಪಕ್ಷವೆತ್ತು ಕರ್ನಾಟಕ ಕ್ರಾಂತಿ ರಂಗ ಎನ್ನುತಕ್ಕಂಥಾ ಹೆಸರಿನಲ್ಲಿ ಇತ್ತು ಇಂಥಾ ಒಂದು ಪ್ರಣಾಳಿಕೆಯನ್ನು ಹೊರಡಿಸಿ ಈಗ ಜನತಾ ಪಕ್ಷ ಅಂದುಕೊಂಡು ಅದು ಅಧಿಕಾರಕ್ಕೆ ಬಂದಂಥಾ ಪಕ್ಷವಾಗಿದೆ ನಿನ್ನೆ ದಿನ ಸಹ ಮಾತನಾಡಿದಕ್ಕಂಥಾ ಸಂದರ್ಭದಲ್ಲಿ ಮಾನ್ಯ ಸದಸ್ಯರಾದಂಥಾ ಶ್ರೀ ಹನುಮಂತರಾಯ ದೇಶಾಯಿಯವರು ನನು ಹೇಳಿದರು ಎಂದರೆ ದೇವರಾಜ್ ಅರಸ್‌ರವರಿಗೆ ಕೈ ಕೊಟ್ಟು ಹೋಗಿದಾರೆ ಅನ್ನುವ ಮಾತನ್ನು ಹೇಳಿದರು ನಾನು ರಾಜಕೀಯವಾಗಿ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುವುದಿಲ್ಲ ಸಂದರ್ಭ ಬಂದಿದರಿಂದ ಈ ಮಾತನ್ನು ಹೇಳುತ್ತೇನೆ ಅಷ್ಟೆ. ಮಾನ್ಯ ಸದಸ್ಯರು ಈಗ ಸಭೆಯಲ್ಲಿಲ್ಲ ಆದರೆ ಬಂಗಾರಪ್ಪನವರು ಕೆನೆ ಕೊಟ್ಟಹಾಗೆ ಈ ಕಡೆ ಇರತಕ್ಕಂಥಾ ಸದಸ್ಯರು ಯಾರೂ ಸಹ ಕೆ ಕೊಟ್ಟಿಲ್ಲಾ ಅನ್ನತಕ್ಕಂಥಾ ಮಾತನ್ನು ತಮ್ಮ ಮುಖೇನಾಂತರ ತವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಸ್ಥೊತ್ತು ಕರ್ನಾಟಕದ ಜನತೆ ನಿಮ್ಮಿಂದ ನನು ಒಂದು ಆಶೋತ್ತರವನ್ನು ಇಟ್ಟುಕೊಂಡಿದರು ಅದು ಈವೊತ್ತಿನ ದಿನಸ ನಿರಾಶಾದಾಯಕವಾಗಿದೆ. ಈ ಬಗ್ಗೆ ಕೆಲವು ಉದಾಹರಣೆಗಳನ್ನು ಹೇಳಬಯಸುತ್ತೇನೆ. ಈ ಒಂದು ಜನತಾ ಪ್ರಣಾಳಿಕೆಯನ್ನು ನೋಡಿದರೆ ಅದರಲ್ಲಿ "ಅಭಿವಚನ" ಅಂತ ಹೇಳಿದಾರೆ ಮತ್ತು ಅದರಲ್ಲಿ "ಜನತೆ ಕೈಗೆ ಅಧಿಕಾರ" ಅಂತ ಕೇಳಿದಾರೆ. ಈ ವಿಚಾರದಲ್ಲಿ ನಾನು ಕೇಳುವುದು ಇಷ್ಟೆ, ಈ ಒಂದು ವ್ಯತ್ಯಿ ತೆಗೆಯನ್ನು ತೆಗೆದು ಹಾಕುತ್ತೇನೆಂದು ನನು ಪ್ರಣಾಳಿಕೆಯಲ್ಲಿ ನನು ಹೇಳಿದ್ದೀರೋ ಅದರಂತೆ ಮಾಡಿದ್ದೀರಾ ? ಈ ಬಗ್ಗೆ ಸರ್ಕಾರಿ ಅಧಿಕಾರಿಗಳೆ ನನು ಇದ್ದಾರೋ, ನನು ಸರ್ಕಾರೇ ಯಂತ್ರ ನನು ಇದೆಯೋ ಅದನ್ನು ದುರುಪಯೋಗ ಪಡಿಸಿಕೊಂಡು ಈ ತರಹ ಒಂದು ಮೋಸ ಮಾಡಿದ್ದೀರಿ ಅನ್ನುವುದು ನಮಗೆ ಕಾಣಬರುತ್ತಾ ಇದೆ. ಈವೊತ್ತು ನನೂ ಕೆಲಸ ಇಲ್ಲದೇ ಇರತಕ್ಕಂಥಾವರಿಗೆ ದಿನಕ್ಕೆ ಎರಡು ರೂಪಾಯಿ ಕೊಡುತ್ತೇನೆಂದು ಹೇಳಿದಿರಿ. ಸರ್ಕಾರ ಈ ಆಯವ್ಯಯ ಪಟ್ಟಿಯಲ್ಲಿ ಅದನ್ನೂ ಕೂಡ ಜಾರಿ ಮಾಡಿಲ್ಲ. ನಿಜವಾಗಿಯೂ ಸಹ ಕರ್ನಾಟಕದ ಜನತೆಗೆ ಸಂಬಿಸಿದ್ದೀರಿ ಅಂತ ಹೇಳಬೇಕಾಗುತ್ತದೆ. ಆಲ್ಲದೆ ಈ ರೀತಿ ಸಂಚಿಸುವುದರಲ್ಲಿ ನೀವು ಪ್ರಥಮವಾಗಿ ನವನ್ನು ಗಳಿಸಿದ್ದೀರಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನನಗೆ ಅನಿಸುತ್ತದೆ.